# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು


**ಜನವರಿ ೨ನೇ ವಾರ**

05-01-2026 TO 10-01-2026

# ಚೀನಾಕ್ಕೆ ಭಾರತದ ರಫ್ತು ಶೇ 33ರಷ್ಟು ಹೆಚ್ಚಳ

- ವೆನೆಜುವೆಲಾ:ಅಂಕೆ ಮೀರಿದ ಅಮೆರಿಕ
- ಅಕ್ಕಿ ಉತ್ಪಾದನೆ: ಭಾರತ ಅಗ್ರ
- ಕರಾವಳಿ ಪಡೆಗೆ 'ಸಮುದ್ರ ಪ್ರತಾಪ್'
- ರಾಜ್ಯದಲ್ಲಿ ಹುಲಿ ಗಣತಿ ಆರಂಭ

## ❖ ವೆನೆಜುವೆಲಾ:ಅಂಕೆ ಮೀರಿದ ಅಮೆರಿಕ



# ವೆನೆಜುವೆಲಾ: ಅಂಕೆ ಮೀರಿದ ಅಮೆರಿಕ

ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಆಡಳಿತವು ದಕ್ಷಿಣ ಅಮೆರಿಕದ ತೈಲ ಸಂಪದ್ಭರಿತ ರಾಷ್ಟ್ರ ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು 'ಸೆರೆ' ಹಿಡಿದು ಅಮೆರಿಕಕ್ಕೆ ಕರೆದೊಯ್ದಿದೆ. ಹಲವು ದೇಶಗಳು ಅಮೆರಿಕದ ನಡೆಯನ್ನು ಖಂಡಿಸಿದರೂ ವಲಸೆ, ಮಾದಕ ವಸ್ತುಗಳು ಮತ್ತು ಮಾದಕವಸ್ತು ಭಯೋತ್ಪಾದನೆಯನ್ನು ಹತ್ತಿಕ್ಕಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ. ಆದರೆ, ಮೇಲ್ನೋಟಕ್ಕೆ ಇದು ಕಾರಣವಾಗಿ ಕಂಡರೂ ಈ ಕಾರ್ಯಾಚರಣೆಯ ಹಿಂದೆ ಬೇರೆಯದೇ ಉದ್ದೇಶಗಳಿವೆ. ವೆನೆಜುವೆಲಾದ ತೈಲ ಸಂಪತ್ತಿನ ಮೇಲೆ ಕಣ್ಣಿಟ್ಟಿರುವ ಅಮೆರಿಕ ಅಲ್ಲಿನ ಸರ್ಕಾರದ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಲೇ ಇತ್ತು. ಚೀನಾ, ರಷ್ಯಾಗಳಿಗೆ ಹತ್ತಿರವಾಗಿ ತನ್ನ ವಿರುದ್ಧ ತೊಡೆ ತಟ್ಟಿರುವ ವೆನೆಜುವೆಲಾ ಸರ್ಕಾರವನ್ನು ಕಿತ್ತೊಗೆದು, ಅಲ್ಲಿ ತನ್ನ ನೀತಿ ಬೆಂಬಲಿಸುವ ಸರ್ಕಾರವನ್ನು ಸ್ಥಾಪಿಸುವುದು ಅಮೆರಿಕದ ಉದ್ದೇಶ ಎಂದು ವಿಶ್ಲೇಷಿಸಲಾಗುತ್ತಿದೆ

**4,550 ಕಿ.ಮೀ** ಅಮೆರಿಕ ಮತ್ತು ವೆನೆಜುವೆಲಾ ನಡುವಿನ ವಾಯು ಮಾರ್ಗದ ದೂರ

**19.35 %** ಜಗತ್ತಿನಲ್ಲಿರುವ ಒಟ್ಟು ತೈಲ ನಿಕ್ಷೇಪಗಳಲ್ಲಿ ವೆನೆಜುವೆಲಾದ ಪಾಲು

**ವೆನೆಜುವೆಲಾ, ತೈಲ ವ್ಯಾಪಾರದಲ್ಲಿ ಅಮೆರಿಕದ ಡಾಲರ್ ಕರೆನ್ಸಿಯನ್ನು ಬಳಸುವುದನ್ನು 2017ರಿಂದ ನಿಲ್ಲಿಸಿತ್ತು. ಚೀನಾದ ಯುವಾನ್ ಕರೆನ್ಸಿ ಮೂಲಕ ವಹಿವಾಟು ನಡೆಸುತ್ತಿತ್ತು. ಇದೂ ಅಮೆರಿಕದ ಕೆಂಗಣ್ಣಿಗೆ ಗುರಿಯಾಗಿತ್ತು.**

### ಚೀನಾ ಪ್ರಭಾವ ತಗ್ಗಿಸುವ ಉದ್ದೇಶ

ಭೌಗೋಳಿಕವಾಗಿ ಪಶ್ಚಿಮದ ರಾಷ್ಟ್ರಗಳಲ್ಲಿ ತನ್ನ ಪ್ರಾಬಲ್ಯವನ್ನು ಮತ್ತಷ್ಟು ಹೆಚ್ಚಿಸುವುದು ಅಮೆರಿಕದ ಈ ಕ್ರಮದ ಹಿಂದಿನ ಮತ್ತೊಂದು ಕಾರಣವಾದರೆ, ದಕ್ಷಿಣ ಅಮೆರಿಕದ ವ್ಯಾಪ್ತಿಯಲ್ಲಿ ಚೀನಾ ಮತ್ತು ರಷ್ಯಾ ಪ್ರಭಾವವನ್ನು ... ಹಲವು ದೇಶಗಳಿಗೆ ಚೀನಾ ದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರಗಳಲ್ಲೊಂದು. ಚೀನಾದೊಂದಿಗೆ ಪಾಲುದಾರಿಕೆ ಇದ್ದ ಹೊರತಾಗಿಯೂ ಈ ವಲಯದ ಹಲವು ರಾಷ್ಟ್ರಗಳು ಅಮೆರಿಕದೊಂದಿಗೆ ಉತ್ತಮ ಬಾಂಧವ್ಯ ಹೊಂದಿವೆ. ಆದರೆ, ವೆನೆಜುವೆಲಾ ಮತ್ತು ಕ್ಯೂಬಾ ಅಮೆರಿಕದ ವಿರುದ್ಧ ತೊಡೆ ತಟ್ಟಿದ್ದವು.

ಇತ್ತೀಚಿನ ವರ್ಷಗಳಲ್ಲಿ ಅಮೆರಿಕವು ಕ್ಯೂಬಾಕ್ಕಿಂತಲೂ ವೆನೆಜುವೆಲಾವನ್ನೇ ಹೆಚ್ಚು ಗುರಿಯಾಗಿಸಿಕೊಂಡಿತ್ತು. ಅಮೆರಿಕದಿಂದ ದೂರವಾದ ಬಳಿಕ ಚೀನಾವು ವೆನೆಜುವೆಲಾಕ್ಕೆ ಹತ್ತಿರವಾಗಿತ್ತು. ...

**2024ರಲ್ಲಿ ಅತಿ ಹೆಚ್ಚು ತೈಲ ನಿಕ್ಷೇಪ ಹೊಂದಿದ್ದ ದೇಶಗಳು** (ಕೋಟಿ ಬ್ಯಾರೆಲ್‌ಗಳಲ್ಲಿ)

| ದೇಶ | ನಿಕ್ಷೇಪ |
|---|---|
| ವೆನೆಜುವೆಲಾ | 30,320 |
| ಸೌದಿ ಅರೇಬಿಯಾ | 26,720 |
| ಇರಾನ್ | 20,860 |
| ಕೆನಡಾ | 16,300 |
| ಇರಾಕ್ | 14,502 |
| ಯುಎಇ | 11,300 |
| ಕುವೈತ್ | 10,150 |
| ರಷ್ಯಾ | 8,000 |
| ಲಿಬಿಯಾ | 4,836 |
| ಅಮೆರಿಕ | 4,500 |
| ನೈಜೀರಿಯಾ | 3,750 |

ಜಗತ್ತಿನಲ್ಲೇ ಅತಿ ಹೆಚ್ಚು ಕಚ್ಚಾ ತೈಲ ನಿಕ್ಷೇಪ ಹೊಂದಿರುವ ರಾಷ್ಟ್ರ ವೆನೆಜುವೆಲಾ. ಜಗತ್ತಿನಲ್ಲಿರುವ ಒಟ್ಟು ತೈಲ ನಿಕ್ಷೇಪದಲ್ಲಿ ಶೇ 19.35ರಷ್ಟು ವೆನೆಜುವೆಲಾ ಒಂದರಲ್ಲೇ ಇದೆ. ಒಪೆಕ್‌ನ ಅಂಕಿ ಅಂಶಗಳ ಪ್ರಕಾರ 2024ರಲ್ಲಿ ಜಾಗತಿಕವಾಗಿ ಲಭ್ಯವಿದ್ದ ತೈಲ ನಿಕ್ಷೇಪದ ಪ್ರಮಾಣ 1,566 ಶತಕೋಟಿ (1.56 ಲಕ್ಷ ಕೋಟಿ) ಬ್ಯಾರೆಲ್‌ಗಳು.

### ಮುಂದೇನಾಗಬಹುದು?

### 'ದೊಡ್ಡಣ್ಣ'ನ ಹಳೇ ಚಾಳಿ

- ಸ್ವತಂತ್ರ ರಾಷ್ಟ್ರಗಳ ಆಂತರಿಕ ರಾಜಕೀಯದಲ್ಲಿ ಮೂಗುತೂರಿಸುವುದು ಅಮೆರಿಕದ ಹಳೇ ಚಾಳಿ. 120 ವರ್ಷಗಳಲ್ಲಿ ಸುಮಾರು 35 ರಾಷ್ಟ್ರಗಳಲ್ಲಿನ ...

ಮಡೂರೊ ಮಹಿಳಾ ಅನುಯಾಯಿಯ ಪ್ರತಿಭಟನೆ

## ❖ ಅಕ್ಕಿ ಉತ್ಪಾದನೆ: ಭಾರತ ಅಗ್ರ

**ಸಂದರ್ಭ: 'ಭಾರತವು, ಜಗತ್ತಿನಲ್ಲಿ ಅತಿ ಹೆಚ್ಚು ಅಕ್ಕಿ ಉತ್ಪಾದನೆ ಮಾಡುವ ರಾಷ್ಟ್ರವಾಗಿದೆ. ಈ ಮೂಲಕ ಅಕ್ಕಿ ಉತ್ಪಾದನೆ-ಯಲ್ಲಿ ಚೀನಾವನ್ನು ಭಾರತ ಮೀರಿಸಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.**

- 2024-25ರ ಬೆಳೆ ವರ್ಷದಲ್ಲಿ ಭಾರತವು 15.01 ಕೋಟಿ ಟನ್ ಅಕ್ಕಿ ಉತ್ಪಾದನೆ ಮಾಡಿದೆ, ಚೀನಾ ದೇಶವು 14.52 ಕೋಟಿ ಟನ್ ಉತ್ಪಾದನೆ ಮಾಡಿದೆ. ಈ ಮೂಲಕ ಜಗತ್ತಿನಲ್ಲಿ ಅತಿ ಹೆಚ್ಚು ಅಕ್ಕಿ ಉತ್ಪಾದನೆ ಮಾಡಿದ ನ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ ಎಂದು ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೇಳಿದರು. ಅವರು 25 ಬೆಳೆಗಳ 184 ಹೊಸ ಸುಧಾರಿತ ತಳಿಗಳನ್ನು ಬಿಡುಗಡೆ ಮಾಡಿದರು.
- ಈ ತಳಿಗಳನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್), ಕೇಂದ್ರ ಹಾಗೂ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು, ಖಾಸಗಿ ಬಿತ್ತನೆ ಬೀಜ ಕಂಪನಿಗಳು ಅಭಿವೃದ್ಧಿಪಡಿಸಿವೆ.

- ಈ ಹೊಸ ತಳಿಗಳು ಹೆಚ್ಚು ಇಳುವರಿ ನೀಡಲಿದ್ದು, ರೈತರ ಆದಾಯವನ್ನು ಹೆಚ್ಚಿಸಲಿವೆ. ಹೆಚ್ಚಿನ ಮಟದ ರೋಗ ನಿರೋದಕ ಶಕ್ತಿ ಹೊಂದಿವೆ. ಈ ತ್ವರಿತವಾಗಿ ತಳಿಗಳನ್ನು ರೈತರಿಗೆ ಲಭ್ಯವಾಗಿಸುವಂತೆ ಮಾಡಲಾಗುವುದು ಎಂದು ಸಚಿವರು ಹೇಳಿದ್ದಾರೆ.
- 1969 to 2014ರ ನಡುವೆ ಅಧಿಕ ಇಳುವರಿ ನೀಡುವ 3,969 ತಳಿಗಳಿಗೆ ಅನುಮೋದನೆ ನೀಡಲಾಗಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅಧಿಕ ಇಳುವರಿ ನೀಡುವ 3,236 ತಳಿಗಳಿಗೆ ಅನುಮೋದನೆ ನೀಡಿದೆ ಎಂದು ಹೇಳಿದ್ದಾರೆ.

## ❖ ಅಮೆರಿಕದಲ್ಲಿ ವಲಸಿಗರಿಗೆ ನೆರವು: ಪಟ್ಟಿಯಲ್ಲಿ ಭಾರತಕ್ಕೆ ಸ್ಥಾನ ಇಲ್ಲ

**ಸಂದರ್ಭ: ಅಮೆರಿಕಕ್ಕೆ ಬರುವ ವಲಸಿಗರಿಗೆ ನೀಡುವ ಸೌಲಭ್ಯಗಳು/ನೆರವಿನ ವಿವರ ಹಾಗೂ ಸಂಬಂಧಿಸಿದ ದೇಶಗಳ ಪಟ್ಟಿಯನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಪ್ರಕಟಿಸಿದ್ದು, ಈ ಪಟ್ಟಿಯಲ್ಲಿ ಭಾರತ ಸ್ಥಾನ ಪಡೆದಿಲ್ಲ.**

- ಪಾಕಿಸ್ತಾನ, ಭೂತಾನ್, ಡೊನಾಲ್ಡ್ ಟ್ರಂಪ್ ಚೀನಾ, ಬಾಂಗ್ಲಾದೇಶ, ನೇಪಾಳ ಸೇರಿ 120 ರಾಷ್ಟ್ರಗಳಹೆಸರು ಈ ಪಟ್ಟಿಯಲ್ಲಿವೆ. ಈ ಪಟ್ಟಿಯನ್ನು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರುಥ್ ಸೋಷಿಯಲ್'ನಲ್ಲಿ ಟ್ರಂಪ್ ಪ್ರಕಟಿಸಿದ್ದಾರೆ.
- ವಲಸಿಗರು ಜನಿಸಿದ ದೇಶ ಹಾಗೂ ಅವರಿಗೆ ಅಮೆರಿಕದಲ್ಲಿ ನೀಡಲಾಗುವ ನೆರವಿನ ಪ್ರಮಾಣವನ್ನು ಸಹ ಈ ಪಟ್ಟಿಯಲ್ಲಿ ನೀಡಲಾಗಿದೆ. ಬಾಂಗ್ಲಾದೇಶದಿಂದ ಬಂದಿರುವ ವಲಸಿಗರ ಪೈಕಿ ಶೇ. 54.8ರಷ್ಟು ಕುಟುಂಬಗಳು ನೆರವನ್ನು ಪಡೆಯುತ್ತಿವೆ.
- ಪಾಕಿಸ್ತಾನ(ಶೇ40.2), Nepal 34.5% , China 32.9%, ಹಾಗೂ ಇಸ್ರೇಲ್/ಪ್ಯಾಲೆಸ್ಟೀನ್‌ನ ಶೇ 25.9ರಷ್ಟು ಕುಟುಂಬಗಳು ನೆರವು ಪಡೆಯುತ್ತಿವೆ ಎಂದು ಪಟ್ಟಿಯಲ್ಲಿ ವಿವರಿಸಲಾಗಿದೆ.

## ❖ ಕರಾವಳಿ ಪಡೆಗೆ 'ಸಮುದ್ರ ಪ್ರತಾಪ್'

**ಸಂದರ್ಭ: ದೇಶೀಯವಾಗಿ ವಿನ್ಯಾಸಗೊಳಿಸಿ ನಿರ್ಮಿಸಿರುವ ಮಾಲಿನ್ಯ ನಿಯಂತ್ರಣ ಹಡಗು 'ಸಮುದ್ರ ಪ್ರತಾಪ್' ಅನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಜ.5ರ ಸೋಮವಾರ ಸೇರ್ಪಡೆಗೊಳಿಸಲಿದ್ದಾರೆ. ಭಾರತೀಯ ಕರಾವಳಿ ಪಡೆಗೆ ಸೇರ್ಪಡೆಗೊಳಿಸಲಿದ್ದಾರೆ.**

- 4,200 ಟನ್ ತೂಕದ ಈ ಹಡಗು ಗಂಟೆಗೆ 22 ನಾಟಿಕಲ್ ಮೈಲು ವೇಗದಲ್ಲಿ ಚಲಿಸಲಿದ್ದು, 6 ಸಾವಿರ ನಾಟಿಕಲ್ ಮೈಲು ದೂರ ಚಲಿಸುವ ಸಾಮರ್ಥ್ಯ ಹೊಂದಿದೆ. 114.5 ಮೀಟರ್ ಉದ್ದವಿದ್ದು, ಶೇ 60ರಷ್ಟು ದೇಶೀಯ ವಸ್ತುಗಳಿಂದಲೇ ನಿರ್ಮಾಣಗೊಂಡಿದೆ.
- ಕಡಲ ಮಾಲಿನ್ಯ ನಿಯಂತ್ರಣ ನಿಯಮಗಳು, ಕಡಲ ಕಾನೂನು ಜಾರಿ, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಗಳು ಸೇರಿದಂತೆ ವಿಶೇಷ ಆರ್ಥಿಕ ವಲಯವನ್ನು (ಇಇಝುಡ್) ರಕ್ಷಿಸುವಲ್ಲಿ ಈ ಹಡಗು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ.

Dr. Rajkumar's IAS/KAS Academy

❖ 'ಸ್ವಾದಭರಿತ ಹಾಲಿಗೆ ಶೇ 5ರಷ್ಟು ಜಿಎಸ್‌ಟಿ'

**ಸಂದರ್ಭ: ಸ್ವಾದಭರಿತ ಹಾಲನ್ನು ಡೇರಿ ಉತ್ಪನ್ನವೆಂದು ಪರಿಗಣಿಸಬೇಕೇ ಹೊರತು ಪಾನೀಯ ಎಂದು ವರ್ಗೀಕರಿ ಸುವಂತಿಲ್ಲ. ಹಾಗಾಗಿ, ಅದಕ್ಕೆ ಶೇ12ರಷ್ಟು ಜಿಎಸ್‌ಟಿ ವಿಧಿಸುವ ಬದಲು ಶೇ 5ರಷ್ಟು ಮಾತ್ರ ವಿಧಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.**

- ಈ ಸಂಬಂಧ 'ದೊಡ್ಲ' ಡೇರಿ ಲಿಮಿಟೆಡ್ ಕಂಪನಿ ಸಲ್ಲಿಸಿದ್ದರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿದಾರ ದೊಡ್ಲ ಕಂಪನಿ ಪಾವತಿ ಮಾಡಿರುವ ತೆರಿಗೆ ಹಣವನ್ನು ಮರು ಪಾವತಿಸುವಂತೆ ನಿರ್ದೇಶಿಸಿದೆ.
- 'ಸುವಾಸನೆಭರಿತ ಹಾಲನ್ನು ಹೊಂದಿ ರುವ ಪಾನೀಯಗಳು ಉದ್ದೇಶಿತ ಜಿಎಸ್‌ಟಿ ಸುಂಕದ ಶೀರ್ಷಿಕೆಯ ಅಡಿಯಲ್ಲಿ ಬರುತ್ತವೆಯೇ ಅಥವಾ ಹಾಲು ಮತ್ತು ಕೆನೆ ಬೆರೆಸಿದ ಸಕ್ಕರೆ ಅಥವಾ ಸಿಹಿಕಾರಕಗಳನ್ನು ಒಳಗೊಂಡ ವರ್ಗದಡಿಯಲ್ಲಿ ಬರುತ್ತವೆಯೇ' ಎಂಬುದರ ಪರಾಮರ್ಶೆಯನ್ನು ನ್ಯಾಯಪೀಠ ನಡೆಸಿತು.
- ಸುವಾಸನೆಭರಿತ ಹಾಲು ಮೂಲ ಹಾಲಾಗಿಯೇ ಸ್ವರೂಪದಲ್ಲಿಯೂ ಉಳಿದುಕೊಳ್ಳುತ್ತದೆ ಮತ್ತು ಸುಂಕ ಶೀರ್ಷಿಕೆ ವ್ಯಾಪ್ತಿಗೆ ಒಳಪಡುತ್ತದೆ' ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ ನ್ಯಾಯಪೀಠ, 'ತೆರಿಗೆದಾರರು ಠೇವಣಿ ಮಾಡಿದ ಮೊತ್ತವನ್ನು ಅನ್ವಯವಾಗುವ ಬಡ್ಡಿಯೊಂದಿಗೆ ಮರು ಪಾವತಿಸಬೇಕು' ಎಂದು ತೆರಿಗೆ ಇಲಾಖೆಗೆ ನಿರ್ದೇಶಿಸಿದೆ.
- ಪ್ರಕರಣವೇನು?: ಹಾಲು ಹಾಲಿನ ಉತ್ಪನ್ನಗಳ ತಯಾರಕರ ವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅಧಿಕಾರಿಗಳು ಡೇರಿ ಉತ್ಪನ್ನಗಳಿಗೆ ಅನ್ವಯವಾಗುವ ಶೇ 5ರ ಜಿಎಸ್‌ಟಿಯನ್ನು ಶೇ 12ರಿಂದ ಶೇ18ಕ್ಕೆ ಹೆಚ್ಚಿಸಿದ್ದರು. ಈ ಸಂಬಂಧ ಸಿಜಿಎಸ್‌ಟಿ ಕಾಯ್ದೆಯ ಕಲಂ 74ರ ತೆರಿಗೆ ಅಡಿಯಲ್ಲಿ ತಯಾರಕರಿಗೆ ಷೋಕಾಸ್ ನೋಟಿಸ್ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕಂಪನಿಯು 2021ರ ಡಿಸೆಂಬರ್‌ನಲ್ಲಿ ಜಿಎಸ್ ಟಿಗೆ ₹72.95 ಲಕ್ಷ ಠೇವಣಿ ಮಾಡಿತ್ತು. ನಂತರ ಜಿಎಸ್‌ಟಿ ಆದೇಶವನ್ನು ಪ್ರಶ್ನಿಸಿ ಸಕ್ಷಮ ಪ್ರಾಧಿಕಾರದ ಮೆಟ್ಟಿಲೇರಿತ್ತು. ಇದರ ವಿಚಾರಣೆ ನಡೆಸಿದ ಮೊದಲ ಮೇಲ್ಮನವಿ ಪ್ರಾಧಿಕಾರ ಕಂಪನಿಯ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು.

❖ ರಾಜ್ಯದಲ್ಲಿ ಹುಲಿ ಗಣತಿ ಆರಂಭ: 38 ಅರಣ್ಯ ವಿಭಾಗಗಳಲ್ಲಿ ಗಣತಿಗಾಗಿ ಅಗತ್ಯ ತರಬೇತಿ - ಸಚಿವ ಈಶ್ವರ ಖಂಡ್ರೆ

**ಸಂದರ್ಭ: 'ರಾಜ್ಯದ ಎಲ್ಲ ಅರಣ್ಯ ಪ್ರದೇಶಗಳಲ್ಲಿ (ಜ.5) ಹುಲಿ ಹಾಗೂ ಮಾಂಸಾಹಾರಿ ಪ್ರಾಣಿಗಳ ಗಣತಿ ಆರಂಭಗೊಂಡಿದೆ' ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಇಲ್ಲಿ ತಿಳಿಸಿದರು.**

- ಇಲ್ಲಿ ಪತ್ರಕರ್ತರೊಂದಿಗೆ ಮಾತ ನಾಡಿದ ಅವರು, 'ಕಾಳಿ, ಭದ್ರಾ, ನಾಗರ ಹೊಳೆ, ಬಂಡೀಪುರ, ಬಿ.ಆರ್.ಟಿ ಹುಲಿ ಸಂರಕ್ಷಿತ ಧಾಮ ಸೇರಿದಂತೆ ರಾಜ್ಯದ ಎಲ್ಲ ಅರಣ್ಯ ಪ್ರದೇಶದಲ್ಲಿ ಗಣತಿ ನಾಲ್ಕು ಆರಂಭವಾಗಿದೆ. ವರ್ಷಗಳಿ ಗೊಮ್ಮೆ ದೇಶದಾದ್ಯಂತ ಹುಲಿ ಅಂದಾಜು ಗಣತಿ ನಡೆಯುತ್ತಿದೆ' ಎಂದರು.
- 'ಈಗ ನಡೆಯುವುದು 'ಆರನೇ ಗಣತಿ. ಹಿಂದೆ 2006, 2010, 2014, 2018. 2022 ನಡೆದಿತ್ತು. ರಾಜ್ಯದಲ್ಲಿ ಸುಮಾರು 563 ಹುಲಿಗಳಿವೆ ಎಂಬ ಅಂದಾಜಿದೆ. ದೇಶದಲ್ಲೇ ರಾಜ್ಯ ಎರಡನೇ ಸ್ಥಾನದಲ್ಲಿತ್ತು' ಎಂದರು.
- ಅರಣ್ಯ ಪ್ರದೇಶಗಳ ಪ್ರತಿ ವಲಯದಲ್ಲಿರುವ ಎಲ್ಲ 38 ಅರಣ್ಯ ವಿಭಾಗದ ಗಸ್ತುಗಳಲ್ಲಿ ಈ ಕಾರ್ಯ ನಡೆಯಲಿದೆ. ಇದಕ್ಕಾಗಿ ಕಳೆದ ಅಕ್ಟೋಬರ್-ಡಿಸೆಂಬರ್‌ನಲ್ಲಿ 5 ಹುಲಿ ಸಂರಕ್ಷಿತ ಪ್ರದೇಶಗಳಿಗೆ ಪ್ರತ್ಯೇಕವಾಗಿ ಮತ್ತು ರಾಜ್ಯದ ಎಲ್ಲಾ 13 ಅರಣ್ಯ ವೃತ್ತಗಳ ಮುಂಚೂಣಿ ಸಿಬ್ಬಂದಿಗೂ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.
- ಮೂರು ದಿನ ಎಲ್ಲ ವಿಭಾಗಗಳಲ್ಲಿ ಮೂವರ ತಂಡ ನಿತ್ಯ 5 ಕಿ.ಮೀ. ಕಾಡಿನಲ್ಲಿ ಸಂಚರಿಸಿ ಹುಲಿ, ಚಿರತೆ ಸೇರಿ ಎಲ್ಲ ಮಾಂಸಾಹಾರಿ ಪ್ರಾಣಿಗಳ ಮತ್ತು ಆನೆಯ ಕಾಲು ಗುರುತು, ಲದ್ದಿ, ಪ್ರತ್ಯಕ್ಷ ದರ್ಶನ ಇತ್ಯಾದಿ ವಿವರ ಕಲೆ ಹಾಕಲಿದೆ. ಜ. 15ರಿಂದ 17ರವರೆಗೆ 14 ಅರಣ್ಯ ವಿಭಾಗಗಳಲ್ಲಿ 2ನೇ ಹಂತದ ಗಣತಿ ನಡೆಯಲಿದೆ. ಪ್ರತಿ ತಂಡ ಕಾಡಿನಲ್ಲಿ ಸಂಚರಿಸಿ ಜಿಂಕೆ, ಕಡವೆ, ಕಾಡೆಮ್ಮೆ, ಕಾಡುಕೋಣ ಸೇರಿ ಸಸ್ಯಾಹಾರಿ

ಪ್ರಾಣಿಗಳ ದರ್ಶನದ ಮಾಹಿತಿ ಕಲೆ ಹಾಕಲಿದೆ. ಎಲ್ಲ ಇದರಿಂದ ಎಲ್ಲಿ ಕ್ಯಾಮೆರಾ ಟ್ರಾಪ್ ಅಳವಡಿಸಬೇಕು ಎಂಬುದನ್ನು ನಿರ್ಧರಿ ಸಲು ಅನುಕೂಲವಾಗುತ್ತದೆ ಎಂದರು.

- ಹುಲಿ ಯೋಜನೆ ನಿರ್ದೇಶಕ ರಮೇಶ್ ಕುಮಾರ್ ಅವರನ್ನು ಎನ್.ಟಿ.ಸಿ.ಎ.ಗೆ ನೋಡಲ್ ಅಧಿಕಾರಿಯಾಗಿ ನಾಮನಿರ್ದೇಶನ ಮಾಡಲಾಗಿದೆ. ಇವರು ಈ ಅಂದಾಜಿನ ಉಸ್ತುವಾರಿ ವಹಿಸಲಿದ್ದಾರೆ. ಯಾವ ಪ್ರದೇಶದಲ್ಲಿ ಎಷ್ಟು ಹುಲಿ, ಇತರೆ ಮಾಂಸಾಹಾರಿ ಪ್ರಾಣಿಗಳಿವೆ. ಎಷ್ಟು ಸಸ್ಯಾಹಾರಿ
- ಪ್ರಾಣಿಗಳಿವೆ ಎಂದು ಪಟ್ಟಿಮಾಡಿ, ಅರಣ್ಯವಾರು ಎಷ್ಟು ಹುಲಿಗಳಿವೆ. ಅವುಗಳಿಗೆ ಆಹಾರವಾದ ಸಸ್ಯಾಹಾರಿ ಪ್ರಾಣಿಗಳು ಎಷ್ಟಿವೆ ಎಂದು ಗ್ರಹಿಸಿ ಕಾನನದ ಧಾರಣಾ ಸಾಮರ್ಥ್ಯ ಗುರುತಿಸಲು ಸೂಚಿಸಲಾಗಿದೆ ಎಂದು ವಿವರಿಸಿದರು.
- 'ಹುಲಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದನ್ನು ನೋಡಿದರೆ ಈ ಬಾರಿ ರಾಜ್ಯದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ಗೋಚರಿಸುತ್ತಿದೆ. ಇದು ಗಣತಿಯಿಂದ ನಿಖರವಾಗಿ ತಿಳಿಯಲಿದೆ' ಎಂದು ಹೇಳಿದರು.
- ಹಿಂದಿನ ಸಮೀಕ್ಷೆಯಂತೆ ರಾಜ್ಯದಲ್ಲಿ 563 ಹುಲಿಗಳಿರುವ ಅಂದಾಜು: ಪ್ರತಿ ನಾಲ್ಕು ವರ್ಷಗಳಿ-ಗೊಮ್ಮೆ ಗಣತಿ ಪ್ರಕ್ರಿಯೆ: ಹುಲಿಗಳ ಸಂಖ್ಯೆ ವೃದ್ಧಿಸಿರುವ ಸಾಧ್ಯತೆ.

## ❖ ಅರಸು ದಾಖಲೆ ಸರಿಗಟ್ಟಿದ ಸಿದ್ದರಾಮಯ್ಯ: ಅರಸು ನಂತರ ಮುಖ್ಯಮಂತ್ರಿಯಾಗಿ 7 ವರ್ಷ 239 ದಿನ ಆಡಳಿತ: 17ನೇ ಬಾರಿ ಬಜೆಟ್ ಮಂಡನೆ ಸಿದ್ಧತೆಯಲ್ಲಿ ಮುಖ್ಯಮಂತ್ರಿ

**ಸಂದರ್ಭ: ರಾಜ್ಯದಲ್ಲಿ ಸುದೀರ್ಘ ಅವಧಿಯ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಅರಸು ಹೊಂದಿದ್ದ ದೇವರಾಜ ಅವರ ದಾಖಲೆಯನ್ನು ಸಿದ್ದರಾಮಯ್ಯ ಮಂಗಳವಾರ (ಜ. 6) ಸರಿಗಟ್ಟಲಿದ್ದಾರೆ. ಆ ಮೂಲಕ, ಅತಿ ಹೆಚ್ಚು ಅವಧಿ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಎಂಬ ಗರಿಮೆಗೆ ಅವರು ಪಾತ್ರರಾಗಲಿದ್ದಾರೆ.**


- ಈ ಹಿರಿಮೆಯ ಹೊರತಾಗಿ, ಅತಿ ಹೆಚ್ಚು 16 ಬಾರಿ ಬಜೆಟ್ ಮಂಡಿಸಿದ ದಾಖಲೆಯನ್ನೂ ಸಿದ್ದರಾಮಯ್ಯ ಹೊಂದಿದ್ದಾರೆ. ಅಲ್ಲದೆ, 2026-27ನೇ ಸಾಲಿನಲ್ಲಿ ತಮ್ಮ 17ನೇ ಬಜೆಟ್ ಮಂಡಿಸುವ ಉತ್ಸಾಹದಲ್ಲಿದ್ದಾರೆ.
- ಈ ಸಂತಸವನ್ನು ಸಂಭ್ರಮಿಸಲು ರಾಜ್ಯದಾದ್ಯಂತ ಇರುವ ಸಿದ್ದರಾಮಯ್ಯ ಅವರ ಅಭಿಮಾನಿಗಳು, ಬೆಂಬಲಿಗರು, ಹಿತೈಷಿಗಳು ಸಾಲು ಸಾಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿ ದ್ದಾರೆ. ನೆಲಮಂಗಲದಲ್ಲಿ ಸುಮಾರು 10 ಸಾವಿರ ಜನರಿಗೆ ನಾಟಿಕೋಳಿಯ ಭೋಜನವನ್ನು ಅವರ ಅಭಿಮಾನಿಗಳು ಮಂಗಳವಾರ ಆಯೋಜಿಸಿದ್ದಾರೆ. ವಿಜಯಪುರ, ಕಲಬುರಗಿ, ಹಾಸನ, ಮೈಸೂರು ಸೇರಿದಂತೆ ಹಲವೆಡೆ ರಕ್ತದಾನ ಶಿಬಿರ, ಸಮಾವೇಶಗಳು ನಡೆಯಲಿವೆ.
- 'ಸಾಮಾಜಿಕ ನಾಯಕರಾಗಿ ನ್ಯಾಯ'ದ ಗುರುತಿಸಿಕೊಂಡಿದ್ದ ದೇವರಾಜ ಅರಸು 2,789 ದಿನಗಳು, ಅಂದರೆ 7 ವರ್ಷ 239 ದಿನ (ಎರಡು ಅವಧಿಗೆ) ಮುಖ್ಯಮಂತ್ರಿ ಆಗಿದ್ದರು. ಈ ದಾಖಲೆಯನ್ನು ಸಿದ್ದರಾಮಯ್ಯ ಮುರಿಯಲಿದ್ದಾರೆ.
- ಅರಸು ಅವರು 1972ರ ಮಾರ್ಚ್ 20ರಿಂದ 1980 ಜನವರಿ 7ರವರೆಗೆ ಸತತ ಏಳೂವರೆ ವರ್ಷ ಮುಖ್ಯಮಂತ್ರಿಯಾಗಿ ನಿರ್ವಹಿಸಿದ್ದರು. 201300 ಅವಧಿಯಲ್ಲಿ ಕಾರ್ಯ ಸಿದ್ದರಾಮಯ್ಯ 2018ರ ಮೊದಲ ಬಾರಿ 1,829 ದಿನ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿದ್ದರು. 2023ರ ಮೇ 20ರಿಂದ ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದಾರೆ. ಮುಖ್ಯಮಂತ್ರಿಯ ಅಧಿಕಾರಾವಧಿ ಲೆಕ್ಕ ಮಾಡುವಾಗ ಪ್ರಮಾಣವಚನ ಸ್ವೀಕರಿಸಿದ ದಿನದಿಂದ ಪರಿಗಣಿಸಲಾಗುತ್ತದೆ ಎಂದು ವಿಧಾನಸಭೆ ಮೂಲಗಳು ತಿಳಿಸಿವೆ. ಸಚಿವಾಲಯದ ಅರಸು ಮತ್ತು ಸಿದ್ದರಾಮಯ್ಯ ಇಬ್ಬರೂ ತಮ್ಮ ವರ್ಚಸ್ಸು, ಸಂಘಟನಾ ಚಾತುರ್ಯದಿಂದ
- ರಾಜ್ಯ ರಾಜಕೀಯದಲ್ಲಿ ಬೆಳೆದವರು. ಅಲ್ಪಸಂಖ್ಯಾತ, ಹಿಂದುಳಿದ, ದಲಿತ (ಅಹಿಂದ) ಸಂಯೋಜನೆಯನ್ನು ಸಮರ್ಥವಾಗಿ ಬಳಸಿಕೊಂಡವರು. ಒಕ್ಕಲಿಗರು ಮತ್ತು ಲಿಂಗಾಯತರ ಪ್ರಾಬಲ್ಯದ ನಡುವೆ, ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿ ಪಟ್ಟದಲ್ಲಿ ಉಳಿಯಲು ಕೂಡ ಈ ಸಂಯೋಜನೆ ಇಬ್ಬರಿಗೂ ಸಹಾಯ ಮಾಡಿದೆ. ಸಿದ್ದರಾಮಯ್ಯ ಅವರು ಅಹಿಂದ ನಾಯಕರೆಂದೇ ಹೆಸರು ಗಳಿಸಿದ್ದಾರೆ.

Dr. Rajkumar Academy

ತಮ್ಮ ರಾಜಕೀಯ ವಿರೋಧಿಗಳ ಬಲ ಕುಗ್ಗಿಸಲು ಅವರು ಈ 'ಅಸ್ತ್ರ'ವನ್ನು ಸಮರ್ಥ ವಾಗಿ ಬಳಸಿಕೊಂಡಿದ್ದಾರೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿದೆ.

- ಸಾಮಾಜಿಕ ನ್ಯಾಯ, ಜಾತ್ಯತೀತತೆ ಸಾಮಾಜಿಕ ನ್ಯಾಯ, ಜಾತ್ಯತೀತತೆ ಹಾಗೂ ಕೋಮುವಾದ ವಿರೋಧಿ ನಿಲುವುಗಳನ್ನು ಬಲವಾಗಿ ಪ್ರತಿಪಾದಿಸು ತ್ತಲೇ ಬಂದಿರುವ ಸಿದ್ದರಾಮಯ್ಯ, ಅಹಿಂದ ಗುಂಪುಗಳ ಕಡೆಗೆ ವಿಶೇಷ ಪ್ರೀತಿ ತೋರಿದರು. ತಮ್ಮ ಅಧಿಕಾರಾವಧಿಯಲ್ಲಿ ಅನ್ನಭಾಗ್ಯ, ಕ್ಷೀರ ಭಾಗ್ಯ ಸೇರಿದಂತೆ ಹಲವು 'ಭಾಗ್ಯ'ಗಳ ಜೊತೆಗೆ, ಹಲವು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಈ ಅವಧಿಯಲ್ಲಿ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ 'ಪಂಚ ಗ್ಯಾರಂಟಿ'ಗಳನ್ನು ಅನುಷ್ಠಾನ ಮಾಡಿದೆ. ಸಿದ್ದರಾಮಯ್ಯ ಅವರ ರಾಜಕೀಯ ಜೀವನ ಜನತಾಪಕ್ಷ, ಜನತಾದಳ ಮತ್ತು 2006ರಿಂದ ಕಾಂಗ್ರೆಸ್‌ನಲ್ಲಿ ಮುಂದುವರಿದಿದೆ. ಕರ್ನಾಟಕದ ಇತಿಹಾಸದಲ್ಲಿ ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾದವರಲ್ಲಿ ದೇವರಾಜ ಅರಸು ಅವರ ನಂತರ ಎಸ್. ನಿಜಲಿಂಗಪ್ಪ(7 ವರ್ಷ 175 ದಿನ), ರಾಮಕೃಷ್ಣ ಹೆಗಡೆ (5 ವರ್ಷ 216 ದಿನ), ಬಿ.ಎಸ್.ಯಡಿಯೂರಪ್ಪ (5 ವರ್ಷ 82 ದಿನ) ಇದ್ದಾರೆ.

IAS/KAS Academy



## ❖ ನಾಡಗೀತೆ: ಅನಂತಸ್ವಾಮಿ ಧಾಟಿಯೇ ಸಿಂಧು

**ಸಂದರ್ಭ: ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿ 'ಜಯ ಭಾರತ ಜನನಿಯ ತನುಜಾತೆ...' ನಾಡಗೀತೆ ಹಾಡುವ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.**

- 'ನಾಡಗೀತೆಗೆ ಮೈಸೂರು ಅನಂತಸ್ವಾಮಿ ಅವರ ಧಾಟಿಯನ್ನು ಅಳವಡಿಸಿಕೊಂಡು ಅದರ ಪೂರ್ಣಪಾಠ ಬಳಸಬೇಕು ಹಾಗೂ ಆಲಾಪವಿಲ್ಲದೇ, ಪುನರಾವರ್ತನೆ ಇಲ್ಲದೆ 2 ನಿಮಿಷ 30 ಸೆಕೆಂಡುಗಳಲ್ಲಿ ಹಾಡಬೇಕು' ಎಂದು ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಕಿಕ್ಕೇರಿ ಕೃಷ್ಣಮೂರ್ತಿ ಹೈಕೋರ್ಟ್ ಮೆಟ್ಟಿಲೇರಿದ್ದರು.
- ಈ ರಿಟ್ ಅರ್ಜಿಯನ್ನು ಸುದೀರ್ಘ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸರ್ಕಾರ ಹೊರಡಿಸಿದ್ದ ಆದೇಶವನ್ನು ಎತ್ತಿಹಿಡಿದಿತ್ತು. ಏಕಸದಸ್ಯ ನ್ಯಾಯಪೀಠದ ಈ ಆದೇಶವನ್ನು ಪ್ರಶ್ನಿಸಿ ಕಿಕ್ಕೇರಿ ಕೃಷ್ಣಮೂರ್ತಿ ರಿಟ್ ಮೇಲ್ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಕಾಯಂಗೊಳಿಸಿದೆ.

## ❖ ರಷ್ಯಾದಿಂದ ₹15 ಲಕ್ಷ ಕೋಟಿ ಮೌಲ್ಯದ ಕಚ್ಚಾ ತೈಲ ಖರೀದಿ

**ಸಂದರ್ಭ: ಉಕ್ರೇನ್ ಮತ್ತು ರಷ್ಯಾ ನಡುವೆ ಸಮರ ಆರಂಭವಾದ ನಂತರದಲ್ಲಿ ಭಾರತವು ರಷ್ಯಾದಿಂದ ಅಂದಾಜು 144 ಬಿಲಿಯನ್ ಯೂರೊ (ಸರಿಸುಮಾರು ₹15.19 ಲಕ್ಷ ಕೋಟಿ) ಮೌಲ್ಯದ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದೆ ಎಂದು ಯುರೋಪಿನ 'ಇಂಧನ ಮತ್ತು ಶುದ್ಧ ಗಾಳಿ ಕುರಿತ ಸಂಶೋಧನಾ ಕೇಂದ್ರ' (ಸಿಆರ್‌ಇಎ) ಅಂದಾಜು ಮಾಡಿದೆ.**

- ಇದೇ ಅವಧಿಯಲ್ಲಿ ಚೀನಾ ದೇಶವು ರಷ್ಯಾದಿಂದ ಅಂದಾಜು 210 ಬಿಲಿಯನ್ ಯೂರೊ ಮೌಲ್ಯದ (ಸರಿಸುಮಾರು ₹22.16 ಲಕ್ಷ ಕೋಟಿ) ಕಚ್ಚಾ ತೈಲವನ್ನು ಖರೀದಿಸಿದೆ.
- ಭಾರತವು ರಷ್ಯಾದಿಂದ ಕಚ್ಚಾ ತೈಲ ಮಾತ್ರವೇ ಅಲ್ಲದೆ 18.18 ಬಿಲಿಯನ್ ಯೂರೊ (ಸರಿಸುಮಾರು ₹1.91 ಲಕ್ಷ ಕೋಟಿ) ಮೌಲ್ಯದ ಕಲ್ಲಿದ್ದಲನ್ನು ಕೂಡ ಖರೀದಿಸಿದೆ.
- ಚೀನಾ ಕೂಡ ರಷ್ಯಾದಿಂದ ಹಾಗೂ ಅನಿಲವನ್ನು ಕಲ್ಲಿದ್ದಲು ಖರೀದಿಸಿದೆ.
- ಇದೇ ಅವಧಿಯಲ್ಲಿ ಐರೋಪ್ಯ ಒಕ್ಕೂಟವು ರಷ್ಯಾದಿಂದ ಒಟ್ಟು 218.1 ಬಿಲಿಯನ್ ಯೂರೊ (ಸರಿಸುಮಾರು ₹23.02 ಲಕ್ಷ ಕೋಟಿ) ಮೌಲ್ಯದ ಪಳೆಯುಳಿಕೆ ಇಂಧನವನ್ನು (ಕಲ್ಲಿದ್ದಲು. ತೈಲ ಮತ್ತು ಅನಿಲ) ಖರೀದಿಸಿದೆ.

Dr. Rajkumar IAS Academy

## ❖ ಟ್ರಂಪ್ ಕಣ್ಣು ಯಾರ ಮೇಲೆ?

ತನ್ನ ಸಾಮ್ರಾಜ್ಯಶಾಹಿ ಮನೋಭಾವ ಮತ್ತು ತೈಲ ಹಾಗೂ ಆರ್ಥಿಕ ಅಗತ್ಯಗಳಿಗಾಗಿ ವಿವಿಧ ನೆಪವೊಡ್ಡಿ ವಿದೇಶಗಳ ಮೇಲೆ ದಾಳಿ ಮಾಡುವುದು, ನಿರ್ಬಂಧ ವಿಧಿಸುವುದು ಅಮೆರಿಕಕ್ಕೆ ಹೊಸದೇನಲ್ಲ. ಅದು 'ದೊಡ್ಡಣ್ಣ'ನ ದರ್ಪವನ್ನು ಮುಂದುವರಿಸುತ್ತಲೇ ಇದೆ. ದಿಢೀರ್ ಕಾರ್ಯಾಚರಣೆ ನಡೆಸಿ, ವೆನೆಜುವೆಲಾದ ಅಧ್ಯಕ್ಷರ ಮನೆಗೆ ನುಗ್ಗಿ ಅವರನ್ನು ಅಪಹರಿಸಿ ತನ್ನ ದೇಶದಲ್ಲಿ ಸೆರೆಯಲ್ಲಿಟ್ಟಿರುವ ಅಮೆರಿಕದ ಅಧ್ಯಕ್ಷ ಟ್ರಂಪ್ ಅವರ ಮುಂದಿನ ಗುರಿ ಯಾರು ಎನ್ನುವುದರ ಬಗ್ಗೆ ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ವಿದೇಶಿ ನಾಯಕರನ್ನು ವಿನಾಕಾರಣ ಕಟಕಟೆಯಲ್ಲಿ ನಿಲ್ಲಿಸುವ ಸ್ವಭಾವ, ಹಠಾತ್ ಕೆರಳುವ ಗುಣ, ಆಕ್ರಮಣಕಾರಿ ವರ್ತನೆ, ಕ್ಷಿಪ್ರ ಕಾರ್ಯಾಚರಣೆಗಳಿಗೆ ಹೆಸರಾದ ಟ್ರಂಪ್ ಅವರು ಪ್ರಸ್ತುತ ಗ್ರೀನ್‌ಲ್ಯಾಂಡ್, ಕೊಲಂಬಿಯಾ, ಇರಾನ್, ಮೆಕ್ಸಿಕೊ ಮತ್ತು ಕ್ಯೂಬಾ ಮೇಲೆ ಕಣ್ಣು ನೆಟ್ಟಿದ್ದಾರೆ. ಸುಭದ್ರ ಸರ್ಕಾರ, ಡ್ರಗ್ಸ್ ವಿರುದ್ಧದ ಹೋರಾಟ ಮುಂತಾದ ಕಾರಣಗಳನ್ನು ಮುಂದು ಮಾಡಿ, ಆ ದೇಶಗಳನ್ನು, ಅಲ್ಲಿನ ನಾಯಕರನ್ನು 'ಮಣಿಸುವ' ಸಾಧ್ಯತೆ ಇದೆ ಎನ್ನಲಾಗುತ್ತಿದೆ

# ಟ್ರಂಪ್ ಕಣ್ಣು ಯಾರ ಮೇಲೆ?



### ಗ್ರೀನ್‌ಲ್ಯಾಂಡ್



**ಉತ್ತರ** ಅಮೆರಿಕದಲ್ಲಿ ಆರ್ಕ್‌ಟಿಕ್ ಸಾಗರ ಮತ್ತು ಉತ್ತರ ಅಟ್ಲಾಂಟಿಕ್ ಸಾಗರದ ನಡುವೆ ಇರುವ ದ್ವೀಪ ಗ್ರೀನ್‌ಲ್ಯಾಂಡ್. ಹಿಂದೆ ಡೆನ್ಮಾರ್ಕ್‌ನ ವಸಾಹತು ಆಗಿದ್ದ ಈ ದ್ವೀಪ ಆಡಳಿತದಲ್ಲಿ ಸ್ವಾಯತ್ತೆ ಹೊಂದಿದೆ. ಆದರೆ ಇನ್ನೂ ಸಂಪೂರ್ಣವಾಗಿ ಸ್ವತಂತ್ರ ರಾಷ್ಟ್ರ ವಲ್ಲ. ಡೆನ್ಮಾರ್ಕ್‌ನ ಅಧೀನದಲ್ಲಿದೆ. ನ್ಯಾಟೊದೊಂದಿಗೆ ಗುರುತಿಸಿಕೊಂಡಿದ್ದರೂ ಅದು ಡೆನ್ಮಾರ್ಕ್ ಸದಸ್ಯತ್ವದ ಭಾಗವಾಗಿದೆ. ಇಲ್ಲಿನ ಜನಸಂಖ್ಯೆ 57 ಸಾವಿರ ಮಾತ್ರ. ಸ್ಥಳೀಯವಾಗಿ ಸರ್ಕಾರ ಅಸ್ತಿತ್ವದಲ್ಲಿದೆ. ಹಾಗಿದ್ದರೂ ಡೆನ್ಮಾರ್ಕ್ ಆಡಳಿತದ ನೆರಳಿನಲ್ಲಿಯೇ ಕಾರ್ಯಾಚರಿಸುತ್ತದೆ. ಅಮೆರಿಕದಿಂದ ಗ್ರೀನ್‌ಲ್ಯಾಂಡ್ 2,700ರಿಂದ 4,900 ಕಿ.ಮೀ ದೂರದಲ್ಲಿದೆ (ನಿರ್ದಿಷ್ಟ ಸ್ಥಳಕ್ಕೆ ಅನುಗುಣವಾಗಿ).

ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಾಗಿನಿಂದಲೂ ಗ್ರೀನ್‌ಲ್ಯಾಂಡ್ ತನಗೆ ಬೇಕು ಎಂದು ಹೇಳುತ್ತಾ ಬಂದಿದ್ದ ಡೊನಾಲ್ಡ್ ಟ್ರಂಪ್, ವೆನೆಜುವೆಲಾದಲ್ಲಿ ಕಾರ್ಯಾಚರಣೆ ನಡೆಸಿದ ನಂತರ, ತಮ್ಮ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ. 'ನಮಗೆ ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳು ಬೇಡ. ದೇಶದ ಭದ್ರತೆಯ ದೃಷ್ಟಿಯಿಂದ ಆ ದ್ವೀಪ ಬೇಕು' ಎಂದಿದ್ದಾರೆ. ಇದನ್ನು ವಿರೋಧಿಸಿ ಗ್ರೀನ್‌ಲ್ಯಾಂಡ್ ಸರ್ಕಾರದ ಮುಖ್ಯಸ್ಥ ಜೆನ್ಸ್ ಫ್ರೆಡರಿಕ್ ನೀಲ್ಸೆನ್ ಮತ್ತು ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡರಿಕ್ಸನ್ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಐರೋಪ್ಯ ಒಕ್ಕೂಟದ ನಾಯಕರು ಗ್ರೀನ್‌ಲ್ಯಾಂಡ್, ಡೆನ್ಮಾರ್ಕ್ ಬೆಂಬಲಕ್ಕೆ ನಿಂತಿದ್ದಾರೆ.



ಜೆನ್ಸ್ ಫ್ರೆಡರಿಕ್ ನೀಲ್ಸೆನ್

ಗ್ರೀನ್‌ಲ್ಯಾಂಡ್‌ನ ವಾಯವ್ಯಕ್ಕಿರುವ ಪಿಟಿಫ್ಫಿಕ್ ನೆಲೆಯಲ್ಲಿ ಅಮೆರಿಕದ ಸೇನೆಯ ಉಪಸ್ಥಿತಿ ಇದೆ. ಅದನ್ನು ಇನ್ನಷ್ಟು ವಿಸ್ತರಿಸಲು ಅದು ಬಯಸಿದೆ. ಈ ಭಾಗದ ಸಾಗರದಲ್ಲಿ ರಷ್ಯಾ ಮತ್ತು ಚೀನಾದ ಉಪಸ್ಥಿತಿ ಹೆಚ್ಚುತ್ತಿದೆ. ಅವುಗಳ ನೌಕೆಗಳು, ಜಲಾಂತರ್ಗಾಮಿ ನೌಕೆಗಳು ಓಡಾಡುತ್ತಿವೆ. ವಿರೋಧಿ ರಾಷ್ಟ್ರಗಳ ಚಲನವಲನಗಳ ಮೇಲೆ ನಿಗಾ ಇಡಲು ಇಲ್ಲಿ ಅತ್ಯಾಧುನಿಕ ರೇಡಾರ್ ತಂತ್ರಜ್ಞಾನ ಅಳವಡಿಸುವುದು ಅದರ ಯೋಚನೆ.

ಇದರೊಂದಿಗೆ, ನೈಸರ್ಗಿಕವಾಗಿಯೂ ಇದು ಸಂಪನ್ಮೂಲ ರಾಷ್ಟ್ರ. ವಿವಿಧ ಉದ್ಯಮಗಳಿಗೆ ಬೇಕಾದ ಅಪರೂಪದ ಖನಿಜ ಲೋಹಗಳು, ಲಿಥಿಯಂ, ತೈಲ, ನೈಸರ್ಗಿಕ ಅನಿಲದ ನಿಕ್ಷೇಪ ಇಲ್ಲಿ ಕಂಡು ಬಂದಿದೆ. ಟ್ರಂಪ್ ಅವರು ಮಾತಿನಲ್ಲಿ ದೇಶದ ಭದ್ರತೆಗಾಗಿ ದ್ವೀಪ ಅಗತ್ಯ ಎಂದು ಹೇಳುತ್ತಿದ್ದರೂ, ಅಲ್ಲಿನ ನೈಸರ್ಗಿಕ ಸಂಪನ್ಮೂಲದ ಮೇಲೂ ಅವರು ಕಣ್ಣು ನೆಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.

### ಕೊಲಂಬಿಯಾ



**ವೆನೆಜುವೆಲಾದ** ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಸೆರೆಹಿಡಿದು ಹೊತ್ತೊಯ್ದ ಕೆಲವೇ ಗಂಟೆಗಳ ನಂತರ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬಾಯಲ್ಲಿ ಬಂದ ಹೆಸರು ಕೊಲಂಬಿಯಾ. ಕೊಲಂಬಿಯಾದ ಅಧ್ಯಕ್ಷ ಗುಸ್ತಾವೊ ಪೆಟ್ರೊ ಅವರಿಗೆ ಟ್ರಂಪ್ ಎಚ್ಚರಿಕೆಯ ಸಂದೇಶ ನೀಡಿದ್ದೂ ಅಲ್ಲದೇ, ಅವರ ವಿರುದ್ಧ ಸೇನಾ ಕಾರ್ಯಾಚರಣೆ ಉತ್ತಮ ಆಯ್ಕೆಯಾಗಿದೆ ಎಂದಿದ್ದರು.

ಕೊಲಂಬಿಯಾ, ದಕ್ಷಿಣ ಅಮೆರಿಕದ ನಾಲ್ಕನೇ ಅತ್ಯಂತ ದೊಡ್ಡ ದೇಶವಾಗಿದ್ದು, ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವೂ ಆಗಿದೆ. ಅದು ವೆನೆಜುವೆಲಾದ ಪಶ್ಚಿಮ ಗಡಿಗೆ ಹೊಂದಿಕೊಂಡಿದೆ. ಅಪಾರ ತೈಲ ನಿಕ್ಷೇಪಗಳಿರುವ, ಚಿನ್ನ, ಬೆಳ್ಳಿ, ಪ್ಲಾಟಿನಂ, ಲಿಥಿಯಂ, ಪಚ್ಚೆಯಂಥ ಅಪರೂಪದ ಖನಿಜಗಳಿಗೆ ಹೆಸರಾಗಿದೆ. ಮಾದಕ ವಸ್ತು ಕೊಕೇನ್ ಬಳಕೆ ಮತ್ತು ಮಾರಾಟ ಅಲ್ಲಿ ವ್ಯಾಪಕವಾಗಿದೆ. ಎಡಪಂಥೀಯರಾಗಿದ್ದ ಗುಸ್ತಾವೊ ಪೆಟ್ರೊ ಕೊಲಂಬಿಯಾದಲ್ಲಿ 2022ರ ಚುನಾವಣೆಯಲ್ಲಿ ಜಯಗಳಿಸಿ ಅಧಿಕಾರಕ್ಕೇರಿದ್ದರು. ಅವರು ಮಾದಕ ವಸ್ತು ಮಾಫಿಯಾದೊಂದಿಗೆ ನಂಟು ಹೊಂದಿದ್ದಾರೆ ಎನ್ನುವುದು ಅಮೆರಿಕದ ಆರೋಪ. 'ಕೊಕೇನ್ ತಯಾರಿಸಿ, ಅದನ್ನು ಅಮೆರಿಕಕ್ಕೆ ಮಾರುವ ಒಬ್ಬ ರೋಗಗ್ರಸ್ತ ಮನುಷ್ಯ ಕೊಲಂಬಿಯಾ ಅಧಿಕಾರ ಹಿಡಿದಿದ್ದಾನೆ. ಇದೆಲ್ಲ ಹೆಚ್ಚು ದಿನ ನಡೆಯುವುದಿಲ್ಲ' ಎಂದು ಟ್ರಂಪ್ ಸೂಚ್ಯವಾಗಿ ಹೇಳಿದ್ದಾರೆ. ಡ್ರಗ್ಸ್ ತಡೆಗಾಗಿ ಅಮೆರಿಕವು ಕೊಲಂಬಿಯಾಕ್ಕೆ ಪ್ರತಿವರ್ಷ ಕೋಟ್ಯಂತರ ಡಾಲರ್ ಸೇನಾ ನೆರವು ನೀಡುತ್ತಿದೆ.



ಗುಸ್ತಾವೊ ಪೆಟ್ರೊ

### ಕ್ಯೂಬಾ



**ಅಮೆರಿಕದ** ಸತತ ಪ್ರಯತ್ನಗಳ ನಡುವೆಯೂ, ಸುಮಾರು ಆರು ದಶಕಗಳಿಂದ ಅದಕ್ಕೆ ಸಡ್ಡು ಹೊಡೆಯುತ್ತಲೇ ಬಂದಿರುವ ಪುಟ್ಟ ದೇಶ ಕ್ಯೂಬಾ. ಕಮ್ಯುನಿಸ್ಟ್ ಆಡಳಿತ ಇರುವ, 1.1 ಕೋಟಿ ಜನಸಂಖ್ಯೆಯ ಕ್ಯೂಬಾ, ಸೋವಿಯತ್ ಒಕ್ಕೂಟ ಪತನಗೊಂಡ ನಂತರ ಅಮೆರಿಕಕ್ಕೆ ತಲೆಬಾಗುತ್ತದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ, ಕ್ಯೂಬಾ ಕ್ರಾಂತಿಯ ನಾಯಕ ಮತ್ತು ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೊ ಅದಕ್ಕೆ ಆಸ್ಪದ ನೀಡಲಿಲ್ಲ. ಕ್ಯೂಬಾದ ಮೇಲೆ ಅಮೆರಿಕ 1960ರಿಂದಲೂ ಅನೇಕ ನಿರ್ಬಂಧಗಳನ್ನು ವಿಧಿಸುತ್ತಲೇ ಬಂದಿದೆ. ಫಿಡೆಲ್ ಕ್ಯಾಸ್ಟ್ರೊ ಮತ್ತು ರೌಲ್ ಕ್ಯಾಸ್ಟ್ರೊ ಆಡಳಿತದ ನಂತರ ಹಿರಿಯ ಕಮ್ಯೂನಿಸ್ಟ್ ನಾಯಕ ಮಿಗೆಲ್ ಡಿಯಾಜ್ ಕನ್ಲ್ ಕ್ಯೂಬಾ ಅಧ್ಯಕ್ಷರಾಗಿದ್ದಾರೆ. ಕ್ಯೂಬಾಕ್ಕೆ ವೆನೆಜುವೆಲಾದಿಂದ ಶೇ 30ರಷ್ಟು ತೈಲ ರಫ್ತಾಗುತ್ತಿತ್ತು. ಪ್ರಸ್ತುತ ಅದು ಆರ್ಥಿಕತೆ ಕುಸಿತ, ವಿದ್ಯುತ್ ಅಭಾವದ ಜತೆಗೆ ತೀವ್ರ ತೈಲ ಅಭಾವ ಎದುರಿಸುತ್ತಿದೆ. ಟ್ರಂಪ್ ಅವರ ನಿಗಾದಲ್ಲಿ ಕ್ಯೂಬಾ ಕೂಡ ಇದೆ. ಆದರೆ, 'ಕ್ಯೂಬಾ ಮೇಲೆ ಸೇನಾ ಕಾರ್ಯಾಚರಣೆ ನಡೆಸುವ ಅಗತ್ಯವೇ ಇಲ್ಲ. ವೆನೆಜುವೆಲಾದ ಬೆಳವಣಿಗೆಗಳಿಂದ ಅದರ ಆದಾಯಕ್ಕೆ ಪೆಟ್ಟು ಬಿದ್ದಿದ್ದು, ಅದೇ ಕುಸಿದು ಬೀಳುವಂತೆ ಕಾಣುತ್ತಿದೆ' ಎಂದು ಟ್ರಂಪ್ ವಿಶ್ವಾಸದಿಂದ ನುಡಿದಿದ್ದಾರೆ.



ಮಿಗೆಲ್ ಡಿಯಾಜ್ ಕನ್ಲ್

### ಮೆಕ್ಸಿಕೊ



**ಅಮೆರಿಕದ** ದಕ್ಷಿಣಕ್ಕೆ ಇರುವ ನೆರೆ ರಾಷ್ಟ್ರ ಮೆಕ್ಸಿಕೊದೊಂದಿಗೂ ಟ್ರಂಪ್ ಸಂಬಂಧ ಉತ್ತಮವಾಗಿಲ್ಲ. ದಕ್ಷಿಣ ಅಮೆರಿಕದ ರಾಷ್ಟ್ರಗಳಿಂದ ಮೆಕ್ಸಿಕೊ ಮಾರ್ಗವಾಗಿ ಅಕ್ರಮ ವಲಸಿಗರು ಅಮೆರಿಕಕ್ಕೆ ಬರುತ್ತಾರೆ ಎಂಬುದು ಅವರ ಅಸಮಾಧಾನಕ್ಕೆ ಒಂದು ಕಾರಣವಾದರೆ, ಭಾರಿ ಪ್ರಮಾಣದ ಮಾದಕ ವಸ್ತುಗಳು ಅಮೆರಿಕ ಪ್ರವೇಶಿಸಲು ಮೆಕ್ಸಿಕೊ ರಹದಾರಿಯಾಗಿದೆ ಎಂಬುದು ಟ್ರಂಪ್ ಕೋಪಕ್ಕೆ ಮತ್ತೊಂದು ಕಾರಣ. ಅಕ್ರಮ ವಲಸಿಗರನ್ನು ತಡೆಯಲು ತಮ್ಮ ಮೊದಲ ಅವಧಿಯಲ್ಲೇ ಅವರು ಮೆಕ್ಸಿಕೊ ಗಡಿಯಲ್ಲಿ ದೊಡ್ಡ ಗೋಡೆ ನಿರ್ಮಾಣಕ್ಕೆ ಆದ್ಯತೆ ನೀಡಿದ್ದರು. ಕಳೆದ ವರ್ಷ ಮತ್ತೆ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ತಕ್ಷಣವೇ ಮೆಕ್ಸಿಕೊ ಕೊಲ್ಲಿಯನ್ನು ಅಮೆರಿಕ ಕೊಲ್ಲಿ ಎಂದು ಮರುನಾಮಕರಣ ಮಾಡಿದ್ದರು. ಎರಡು ದಿನಗಳ ಹಿಂದೆ ಮಾತನಾಡಿದ್ದ ಟ್ರಂಪ್, 'ಅಮೆರಿಕದ ಒಳಕ್ಕೆ ಬರುತ್ತಿರುವ ಅಕ್ರಮ ವಲಸಿಗರು ಮತ್ತು ಮಾದಕ ದ್ರವ್ಯಗಳ ಹರಿವು ತಡೆಗೆ ಮೆಕ್ಸಿಕೊ ಆಡಳಿತ ಏನೂ ಮಾಡುತ್ತಿಲ್ಲ. ದೇಶಕ್ಕೆ ರವಾನೆಯಾಗುತ್ತಿರುವ ಭಾರಿ ಪ್ರಮಾಣದ ಮಾದಕ ವಸ್ತುಗಳನ್ನು ನಡೆಯಲು ನಾವು ಏನಾದರೂ ಮಾಡುತ್ತೇವೆ' ಎಂದು ಹೇಳಿದ್ದಾರೆ. ಇವುಗಳ ನಿಯಂತ್ರಣಕ್ಕಾಗಿ ತಮ್ಮ ಸೇನಾ ಪಡೆಗಳನ್ನು ಮೆಕ್ಸಿಕೊಕ್ಕೆ ಕಳುಹಿಸಿಕೊಡುತ್ತೇವೆ ಎಂದು ಹೇಳಿದ್ದ. ಆದರೆ, ಮೆಕ್ಸಿಕೊ ಅಧ್ಯಕ್ಷೆ ಕ್ಲೌಡಿಯಾ ಶೇನ್‌ಬಾಮ್ ಅವರು ಸಾರ್ವಜನಿಕವಾಗಿ ಇದನ್ನು ತಿರಸ್ಕರಿಸಿದ್ದರು ಎಂದೂ ಹೇಳಿದ್ದಾರೆ.



ಕ್ಲೌಡಿಯಾ ಶೇನ್‌ಬಾಮ್

### ಇರಾನ್



**ಪಶ್ಚಿಮ** ಏಷ್ಯಾದಲ್ಲಿರುವ, ಆಯತೊಲ್ಲಾ ಖಮೇನಿ ನಾಯಕತ್ವದ ಇರಾನ್ ಮೊದಲಿನಿಂದಲೂ ಅಮೆರಿಕವನ್ನು ಕಟುವಾಗಿ ವಿರೋಧಿಸುತ್ತಾ ಬಂದಿರುವ ರಾಷ್ಟ್ರ. ಇರಾನ್ ಅಣ್ವಸ್ತ್ರ ಹೊಂದುವುದು ಅಮೆರಿಕಕ್ಕೆ ಇಷ್ಟವಿಲ್ಲ. ಇರಾನಿನಲ್ಲಿ ಕೆಲವು ದಿನಗಳಿಂದ ಆಡಳಿತ ವಿರೋಧಿ ಪ್ರತಿಭಟನೆ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಪ್ರತಿಭಟನೆಯನ್ನು ಹತ್ತಿಕ್ಕಲು ಇರಾನ್ ಆಯ್ದುಕೊಂಡಿರುವ ಮಾರ್ಗವನ್ನು ಖಂಡಿಸಿ ಟ್ರಂಪ್ ಅವರು ಆರಂಭದಲ್ಲಿ ಹೇಳಿಕೆ ನೀಡಿದ್ದರು. ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಿ ಹೋರಾಟವನ್ನು ಹತ್ತಿಕ್ಕಲು ಅಲ್ಲಿನ ಆಡಳಿತ ಪ್ರಯತ್ನಿಸುತ್ತಿದೆ. ಇದೇ ಕ್ರಮವನ್ನು ಮುಂದುವರಿಸಿದರೆ ನಾವು ಬಲವಾದ ಏಟು ನೀಡಬೇಕಾಗುತ್ತದೆ ಎಂದು ಟ್ರಂಪ್ ಹೇಳಿದ್ದಾರೆ. 'ಇರಾನ್ ಬೆಳವಣಿಗೆಯನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಈ ಹಿಂದೆ ಮಾಡಿದಂತೆ ಅವರು ಈಗಲೂ ಜನರನ್ನು ಕೊಂದರೆ, ಅವರು ಅಮೆರಿಕದಿಂದ ಬಲವಾದ ಏಟು ತಿನ್ನಲಿದ್ದಾರೆ' ಎಂದು ಹೇಳಿದ್ದಾರೆ. ಕಳೆದ ವರ್ಷ ಇಸ್ರೇಲ್-ಇರಾನ್ ಕದನದ ಕೊನೆಯ ಹಂತದಲ್ಲಿ ಅಮೆರಿಕ ಇರಾನಿನ ಅಣ್ವಸ್ತ್ರ ಅಭಿವೃದ್ಧಿ ಘಟಕಗಳನ್ನು ಗುರಿಯಾಗಿಸಿಕೊಂಡು ಬಾಂಬ್ ದಾಳಿ ನಡೆಸಿತ್ತು. ಈಗ ವೆನೆಜುವೆಲಾದಲ್ಲಿ ಅಮೆರಿಕ ಕೈಗೊಂಡ ಸೇನಾ ಕಾರ್ಯಾಚರಣೆಯನ್ನು ಇರಾನ್ ಬಲವಾಗಿ ಖಂಡಿಸಿದೆ.



ಆಯತೊಲ್ಲಾ ಖಮೇನಿ

ಆಧಾರ: ಬಿಬಿಸಿ, ರಾಯಿಟರ್ಸ್, ಎಪಿ, ಫ್ರಾನ್ಸ್24

## ❖ ಜಿಡಿಪಿ: ಈ ವರ್ಷದಲ್ಲಿ 87.4 3 7.4ರಷ್ಟು ಬೆಳವಣಿಗೆ

**ಸಂದರ್ಭ: ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಅರ್ಥಿಕತೆಯ ಬೆಳವಣಿಗೆ ಅಂದಾಜನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಈ ವರ್ಷದಲ್ಲಿ ಅರ್ಥ ವ್ಯವಸ್ಥೆಯು ಶೇ 7.4ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂದಾಜಿನಲ್ಲಿ ಹೇಳಲಾಗಿದೆ.**

- ಈ ಪ್ರಮಾಣದ ಸಾಧ್ಯವಾದಲ್ಲಿ, ಬೆಳವಣಿಗೆ ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆಯನ್ನು ಭಾರತ ಸಾಧಿಸಿದಂತಾಗುತ್ತದೆ. ಆದರೆ ದ್ರೋಕರೇಜ್ ಕಂಪನಿ ಗೋಲ್ಡ್ ಮನ್ ಸಾಕ್ಸ್ ಸಿದ್ಧಪಡಿಸಿರುವ ವರದಿಯೊಂದರ ಪ್ರಕಾರ ಈ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆಯು ಶೇ 7.3ರಷ್ಟು ಆಗಲಿದೆ.
- ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿನ ಪ್ರಕಾರ ಕೂಡ ಭಾರತದ ಜಿಡಿಪಿ 2025-26ರಲ್ಲಿ ಶೇ 7.3ರಷ್ಟು ಬೆಳೆಯಲಿದೆ. ಜಿಎಸ್‌ಟಿ ದರ ಇಳಿಕೆ, ಆದಾಯ ತೆರಿಗೆ ಮಿತಿ ಹೆಚ್ಚಳದಂತಹ ಕ್ರಮಗಳು ಆರ್ಥಿಕ ಚಟುವಟಿಕೆ ಚೆನ್ನಾಗಿ ಇರುವುದಕ್ಕೆ ಕಾರಣವಾಗಿವೆ ಎಂದು ತಜ್ಞರು ಹೇಳಿದ್ದಾರೆ.
- ಚೀನಾದ ಬೆಳವಣಿಗೆ ದರವು 2025ರಲ್ಲಿ ಶೇ 4.9ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜು ಮಾಡಿದೆ.
- ಮೊದಲ ಮುಂಗಡ ಅಂದಾಜನ್ನು ಪ್ರಕಟಿಸಿದ ಕೇಂದ್ರ ಸರ್ಕಾರ: ದೇಶದ ಅರ್ಥ ವ್ಯವಸ್ಥೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ (2025-26) ಶೇಕಡ 7.4ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ. ಹಿಂದಿನ ಹಣಕಾಸು ವರ್ಷದಲ್ಲಿ ಬೆಳವಣಿಗೆ ಪ್ರಮಾಣವು ಶೇ 6.5ರಷ್ಟು ಇತ್ತು.
- ಸೇವಾ ವಲಯ ಹಾಗೂ ತಯಾರಿಕಾ ವಲಯಗಳಲ್ಲಿ ಚಟುವಟಿಕೆ ಚೆನ್ನಾಗಿ ಇರುವುದು ಈ ಬಾರಿ ಬೆಳವಣಿಗೆಯು ಕಳೆದ ವರ್ಷಕ್ಕಿಂತ ಹೆಚ್ಚಿರುವಂತೆ ಮಾಡಲಿದೆ. ಈ ಮೂಲಕ ಭಾರತವು ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ದೇಶವಾಗಿ ಮುಂದುವರಿಯಲಿದೆ.
- 2023-24ರಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣವು ಶೇ 9.2ರಷ್ಟು ಇತ್ತು. ದೇಶದ ಜಿಡಿಪಿ ಬೆಳವಣಿಗೆಗೆ ಸಂಬಂಧಿಸಿದ ಮೊದಲ ಅಂದಾಜನ್ನು ಸೇವಾ ವಲಯ ಹಾಗೂ ತಯಾರಿಕಾ ವಲಯಗಳಲ್ಲಿ ಚಟುವಟಿಕೆ ಚೆನ್ನಾಗಿ ಇರುವುದು ಈ ಬಾರಿ ಬೆಳವಣಿಗೆಯು ಕಳೆದ ವರ್ಷಕ್ಕಿಂತ ಹೆಚ್ಚಿರುವಂತೆ ಮಾಡಲಿದೆ. ಈ ಮೂಲಕ ಭಾರತವು ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ದೇಶವಾಗಿ ಮುಂದುವರಿಯಲಿದೆ.
- ಸೇವಾ ವಲಯ ಹಾಗೂ ತಯಾರಿಕಾ ವಲಯಗಳಲ್ಲಿ ಚಟುವಟಿಕೆ ಚೆನ್ನಾಗಿ ಇರುವುದು ಈ ಬಾರಿ ಬೆಳವಣಿಗೆಯು ಕಳೆದ ವರ್ಷಕ್ಕಿಂತ ಹೆಚ್ಚಿರುವಂತೆ ಮಾಡಲಿದೆ. ಈ ಮೂಲಕ ಭಾರತವು ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ದೇಶವಾಗಿ ಮುಂದುವರಿಯಲಿದೆ.
- 2023-24ರಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣವು ಶೇ 9.2ರಷ್ಟು ಇತ್ತು. ದೇಶದ ಜಿಡಿಪಿ ಬೆಳವಣಿಗೆಗೆ ಸಂಬಂಧಿಸಿದ ಮೊದಲ ಅಂದಾಜನ್ನು ಕೇಂದ್ರ ಸರ್ಕಾರವು ಬುಧವಾರ ಬಿಡುಗಡೆ ಮಾಡಿದೆ.
- ಪ್ರಸಕ್ತ ಹಣಕಾಸು ವರ್ಷದಲ್ಲಿ ತಯಾರಿಕಾ ವಲಯದಲ್ಲಿನ ಒಟ್ಟು ಮೌಲ್ಯ ಸೇರ್ಪಡೆಯು (ಜಿವಿಎ) ಶೇ 7ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ.
- ಇದು ಹಿಂದಿನ ವರ್ಷದ ಶೇ 4.5ರಷ್ಟು ಜಿವಿಎಗಿಂತ ಹೆಚ್ಚಿನದ್ದಾಗಲಿದೆ.
- ಸೇವಾ ವಲಯದಲ್ಲಿನ ಬೆಳವಣಿಗೆಯು ಶೇ9.1ರಷ್ಟು ಇರಲಿದೆ (ಹಿಂದಿನ ವರ್ಷದಲ್ಲಿ ಇದು ಶೇ 7.2ರಷ್ಟು ಇತ್ತು) ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ ಅಧೀನದಲ್ಲಿ ಕೆಲಸ ಮಾಡುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂದಾಜಿನಲ್ಲಿ ಹೇಳಲಾಗಿದೆ.
- ಕೃಷಿ ಮತ್ತು ಸಂಬಂಧಿತ ವಲಯ-ಗಳಲ್ಲಿನ ಬೆಳವಣಿಗೆಯು ಈ ವರ್ಷದಲ್ಲಿ ಶೇ 3.1ಕ್ಕೆ ಇಳಿಕೆ ಆಗುವ ಸಾಧ್ಯತೆ ಇದೆ. ಹಿಂದಿನ ವರ್ಷದಲ್ಲಿ ಇದು ಶೇ 4.6ರ ಮಟ್ಟದಲ್ಲಿತ್ತು. ಈ ವರ್ಷದಲ್ಲಿ ನೈಜ ಜಿಡಿಪಿ ಗಾತ್ರವು

Dr. Rajkumar IAS/KAS Academy

₹201.90 ಲಕ್ಷ ಕೋಟಿಯಷ್ಟಾಗುವ ಅಂದಾಜು ಮಾಡಲಾಗಿದೆ. ಅಮೆರಿಕದ ಡಾಲರ್ ಲೆಕ್ಕದಲ್ಲಿ ಜಿಡಿಪಿ ಗಾತ್ರವು 3.97 ಟ್ರಿಲಿಯನ್ ಆಗಲಿದೆ (1 ಡಾಲರ್ 90 ರೂಪಾಯಿಗೆ ಸಮ ಎಂಬ ಅಂದಾಜಿನೊಂದಿಗೆ).

- ಕೇಂದ್ರ ಸರ್ಕಾರವು ಮುಂದಿನ ಹಣಕಾಸು ವರ್ಷದ ಬಜೆಟ್ ಅನ್ನು ಫೆಬ್ರುವರಿ 1ರಂದು ಮಂಡಿಸುವ ನಿರೀಕ್ಷೆ ಇದ್ದು, ಬಜೆಟ್ ಸಿದ್ಧಪಡಿಸುವ ಸಂದರ್ಭದಲ್ಲಿ ಮುಂಗಡ ಅಂದಾಜನ್ನು ಆಶ್ರಯಿಸುತ್ತದೆ.
- "ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ಗಳು ಹೆಚ್ಚಿದ್ದರೂ, ದೇಶದ ಬೆಳವಣಿಗೆ ದರವು ಕಡಿಮೆ ಆಗಿಲ್ಲ. ಹಣಕಾಸು ಮತ್ತು ವಿತ್ತೀಯ ನೀತಿಗಳು ಹೊಂದಾಣಿಕೆಯ ಗುಣ ಹೊಂದಿದ್ದುದು, ಕಾರ್ಪೊರೇಟ್ ಕಂಪನಿಗಳ ಹಣಕಾಸಿನ ಚೆನ್ನಾಗಿರುವುದು, ಮುಂಗಾರು ಮಳೆ ಚೆನ್ನಾಗಿ ಆಗಿರುವುದು ಹಾಗೂ ಕಚ್ಚಾ ತೈಲದ ಬೆಲೆಯು ಕಡಿಮೆ ಇರುವುದು ಇದಕ್ಕೆ ಕಾರಣ' ಎಂದು ಕ್ರಿಸಿಲ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞ ಧರ್ಮಕೀರ್ತಿ ಜೋಷಿ ಹೇಳಿದ್ದಾರೆ.
- ಹಬ್ಬಗಳ ಹೊತ್ತಿನಲ್ಲಿ ನಡೆಯುವ ಉತ್ತಮ ಮಾರಾಟ, ಜಿಎಸ್‌ಟಿ ದರ ಪರಿಷ್ಕರಣೆ ಹಾಗೂ ಆದಾಯ ತೆರಿಗೆ ಮಿತಿಯಲ್ಲಿನ ವಿನಾಯಿತಿಗಳು ಬೇಡಿಕೆಯನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಹಬ್ಬಗಳ ನಂತರದಲ್ಲಿಯೂ ಬೇಡಿಕೆ ಉತ್ತಮ ಮಟ್ಟದಲ್ಲಿ ಎಂದು ಮುಂದುವರಿದಿದೆ ಬ್ಯಾಂಕ್ ಆಫ್ ಬರೋಡದ ಮುಖ್ಯ ಅರ್ಥಶಾಸ್ತ್ರಜ್ಞೆ ಜಾಹ್ನವಿ ಪ್ರಭಾಕರ್ ಹೇಳಿದ್ದಾರೆ.

## ❖ ಆರು ಮಸೂದೆಗಳಿಗೆ ರಾಜ್ಯಪಾಲರ ಅಂಕಿತ

**ಸಂದರ್ಭ: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸದಸ್ಯರ ಪಟ್ಟಿಯಲ್ಲಿ ಕೆಲವು ಜನಪ್ರತಿ-ನಿಧಿಗಳ ಹೆಸರುಗಳು ಬಿಟ್ಟು ಹೋಗಿರುವುದರಿಂದ ಅವರ ಹೆಸರು ಸೇರಿಸುವ ಉದ್ದೇಶದ ಗ್ರೇಟರ್ ಬೆಂಗಳೂರು ಆಡಳಿತ ಎರಡನೇ ತಿದ್ದುಪಡಿ ಮಸೂದೆ'ಯೂ ಸೇರಿ ಒಟ್ಟು ಆರು ಮಸೂದೆಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.**

- ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಮಸೂದೆ, ಕರ್ನಾಟಕ ಕಲ್ಯಾಣ ನಿಧಿ ತಿದ್ದುಪಡಿ ಮಸೂದೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳು ತಿದ್ದುಪಡಿ ಮಸೂದೆ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಬಾಂಬೆ ಪಬ್ಲಿಕ್ ಟ್ರಸ್ಟ್ ಮಸೂದೆಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.


## ❖ ಬನ್ನೇರುಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕಡಿತ: ಸರ್ಕಾರಕ್ಕೆ ಸಿಇಸಿ ತಪರಾಕಿ

**ಸಂದರ್ಭ: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪರಿಸರ ಸೂಕ್ಷ್ಮ ಪ್ರದೇಶವನ್ನು (ಇಎಸ್‌ಝಡ್) 268 ಚದರ ಕಿ.ಮೀ ನಿಂದ 168 ಚದರ ಕಿ.ಮೀ.ಗೆ ಇಳಿಸಿರುವ ಕರ್ನಾಟಕ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿಯು (ಸಿಇಸಿ) ಕಟುವಾಗಿ ಟೀಕಿಸಿದ್ದು. ಈ ಕ್ರಮವು ಉದ್ಯಾನದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಅಭಿಪ್ರಾಯಪಟ್ಟಿದೆ.**

- ಪರಿಸರ ಸೂಕ್ಷ್ಮ ಪ್ರದೇಶವನ್ನು ಇಳಿಸಿರುವ ಸರ್ಕಾರದ ಕ್ರಮ ಪ್ರಶ್ನಿಸಿ ಬೆಂಗಳೂರಿನ ನಿವಾಸಿ ಬೆಳ್ಳಿಯಪ್ಪ ಮತ್ತಿತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು ಈ ಬಗ್ಗೆ, ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು ಸಮಿತಿಯು ಸುಪ್ರೀಂ ಕೋರ್ಟ್‌ಗೆ 524 ಪುಟಗಳ ವರದಿ ಸಲ್ಲಿಸಿದೆ ಯಾವುದೇ ವೈಜ್ಞಾನಿಕ, ಪರಿಸರ ಅಥವಾ ಭೂದೃಶ್ಯ ಮಟ್ಟದ ಅಧ್ಯಯನ ಹಾಗೂ ಮೌಲ್ಯಮಾಪನ ನಡೆಸದೆಯೇ ಪರಿಸರ ಸೂಕ್ಷ್ಮ ಪ್ರದೇಶವನ್ನು ನಿರಂತರವಾಗಿ ಕಡಿತ ಮಾಡಲಾಗಿದೆ ಎಂದೂ ಸಮಿತಿ ತಿಳಿಸಿದೆ.
- ಪರಿಸರ ಸೂಕ್ಷ್ಮ ಪ್ರದೇಶದ ಪಕ್ಕದಲ್ಲೇ ಕರ್ನಾಟಕ ವಸತಿ ಇಲಾಖೆಯು ಸೂರ್ಯನಗರ ಲೇಔಟ್ (ಕೆಎಚ್ ಬಿ ಸೂರ್ಯ ಸಿಟಿ) ಎಂಬ ಬೃಹತ್ ವಸತಿ ಯೋಜನೆ ಅನುಷ್ಠಾನಗೊಳಿಸುತ್ತಿದೆ. ಈ ಪ್ರದೇಶವು ಮೊದಲು ಪರಿಸರ ಸೂಕ್ಷ್ಮ ಪ್ರದೇಶದ ಭಾಗವಾಗಿತ್ತು ವಸತಿ ಬಡಾವಣೆಗಳ ನಿರ್ಮಾಣಕ್ಕೆ ನಿರ್ಬಂಧ ವಿಧಿಸಲಾಗಿತ್ತು ನಗರೀಕರಣದ ಒತ್ತಡದ ನೆಪವೊಡ್ಡಿ 2018ರ ಅಧಿಸೂಚನೆಯಲ್ಲಿ ಈ ಪ್ರದೇಶವನ್ನು ಇಎಸ್ ಝಡ್‌ನಿಂದ ಹೊರಗಿಡಲಾಯಿತು.
- ಆ ಬಳಿಕ ವಸತಿ ಯೋಜನೆಯನ್ನು ಸುಗಮಗೊಳಿಸಲು ದೊಡ್ಡ ಪ್ರಮಾಣದ ಭೂ ಸಮತಟ್ಟು ನೈಸರ್ಗಿಕವಾಗಿ ಎತ್ತರದ ಭೂಪ್ರದೇಶವನ್ನು ಸಮತಟ್ಟಾಗಿಸುವುದು ಸೇರಿದಂತೆ ವ್ಯಾಪಕ ಪ್ರಮಾಣದಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು.
- ಪರಿಸರ ಪರಿಣಾಮದ ಅಧ್ಯಯನ ಹಾಗೂ ವೈಜ್ಞಾನಿಕವಾಗಿ ಮೌಲ್ಯಮಾಪನ ನಡೆಸದೆಯೇ ಈ ಕಾರ್ಯ ನಡೆಸಲಾಯಿತು ಈ ಯೋಜನೆಯು ಕರಡಿಕ್ಕಲ್-ಮಾದೇಶ್ವರ ಕಾರಿಡಾರ್‌ನ ಪಕ್ಕದಲ್ಲಿಯೇ ಅನುಷ್ಠಾನಗೊಳ್ಳುತ್ತಿದೆ. ಈ ಭಾಗದಲ್ಲಿ ಈಗಾಗಲೇ ಮಾನವ-ವನ್ಯಜೀವಿ ಸಂಘರ್ಷ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ' ಎಂದು ಸಮಿತಿಯು ವರದಿಯಲ್ಲಿ ಉಲ್ಲೇಖಿಸಿದೆ.

## ಬನ್ನೇರುಘಟ್ಟ ಪರಿಸರ ಸೂಕ್ಷ್ಮ ಪ್ರದೇಶ

| ವಿಷಯ | 2016ರ ಕರಡು ಅಧಿಸೂಚನೆ | 2020ರ ಅಂತಿಮ ಅಧಿಸೂಚನೆ |
|---|---|---|
| ಅಧಿಸೂಚನೆ | 15.06.2016 | 11.03.2020 |
| ಇಎಸ್‌ಝಡ್ (ಚದರ ಕಿ.ಮೀ) | 268.96 | 168.84 |
| ರಾಷ್ಟ್ರೀಯ ಉದ್ಯಾನದ ಗಡಿ | 100 ಮೀ.ನಿಂದ 4.5 ಕಿ.ಮೀ | 100 ಮೀ.ನಿಂದ 1 ಕಿ.ಮೀ |
| ಗ್ರಾಮಗಳು | 77 | 77 |
| 61 ಗ್ರಾಮಗಳಲ್ಲಿ ಇಎಸ್‌ಝಡ್ | 4.5 ಕಿ.ಮೀ | 1 ಕಿ.ಮೀ |
| 16 ಗ್ರಾಮಗಳಲ್ಲಿ ಇಎಸ್‌ಝಡ್ | 100 ಮೀ | 100 ಮೀ |




### ಶಿಫಾರಸುಗಳು

- 2020ರಲ್ಲಿ ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ಕೇಂದ್ರ ಅರಣ್ಯ ಸಚಿವಾಲಯ ಹಿಂಪಡೆಯಬೇಕು
- 2016ರ ಕರಡು ಅಧಿಸೂಚನೆಯಲ್ಲಿ ಪ್ರಸ್ತಾಪಿಸಿದಂತೆ, ಇಎಸ್‌ಝಡ್ ವ್ಯಾಪ್ತಿ 268.96 ಚದರ ಕಿ.ಮೀ. ಇರಬೇಕು. ದಟ್ಟವಾದ, ಬದಲಾಯಿಸಲು ಆಗದ ನಗರಾಭಿವೃದ್ಧಿ ಚಟುವಟಿಕೆ ಇದ್ದಲ್ಲಿ ಮಾತ್ರ ಮಾರ್ಪಾಡು ಮಾಡಬಹುದು. ಆದರೆ, ಇದಕ್ಕೆ ವೈಜ್ಞಾನಿಕ ಪುರಾವೆಗಳೊಂದಿಗೆ ತಜ್ಞರ ಸಮಿತಿಯ ಲಿಖಿತ, ವಿವರವಾದ ಹಾಗೂ ತರ್ಕಬದ್ಧ ಸಮರ್ಥನೆ ಇರಬೇಕು
- ರಾಷ್ಟ್ರೀಯ ಉದ್ಯಾನದ ಪಕ್ಕದ ಅರಣ್ಯ ಪ್ರದೇಶಗಳೊಂದಿಗೆ ಸಂಪರ್ಕಿಸುವ ಆನೆ ಕಾರಿಡಾರ್‌ಗಳ ನಿರಂತರ ಸಂರಕ್ಷಣೆ ಹಾಗೂ ಬಲಪಡಿಸುವಿಕೆ ಅಗತ್ಯ
- 6 ತಿಂಗಳೊಳಗೆ ಇಎಸ್‌ಝಡ್ ಮರು ಅಧಿಸೂಚನೆ ಪ್ರಕ್ರಿಯೆ ಪೂರ್ಣಗೊಳ್ಳಬೇಕು

### ಅರಣ್ಯ ಸಚಿವರ ನೇತೃತ್ವದಲ್ಲೇ ಕಡಿತಕ್ಕೆ ನಿರ್ಧಾರ

ಅರಣ್ಯ ಸಚಿವರ ನೇತೃತ್ವದ ಸಚಿವ ಸಂಪುಟ ಉಪಸಮಿತಿಯು 2017ರ ಫೆಬ್ರುವರಿ 10ರಂದು ಸಭೆ ಸೇರಿ ಇಎಸ್‌ಝಡ್ ಗಡಿ ಕಡಿತಗೊಳಿಸುವ ತೀರ್ಮಾನ ತೆಗೆದುಕೊಂಡಿತ್ತು. ಪಿಸಿಸಿಎಫ್ ನೇತೃತ್ವದಲ್ಲಿ ಅಧಿಕಾರಿಗಳು ಹಾಗೂ ತಜ್ಞರ ಸಮಿತಿ ರಚಿಸಿ ವರದಿ ಪಡೆಯಬೇಕಿತ್ತು. ಈ ವರದಿಯನ್ನು ಕೇಂದ್ರ ಅರಣ್ಯ ಸಚಿವಾಲಯಕ್ಕೆ ಕಳುಹಿಸಬೇಕಿತ್ತು. ಆದರೆ, ರಾಜ್ಯ ಸರ್ಕಾರವು ಇಂತಹ ಯಾವುದೇ ಕ್ರಮ ಕೈಗೊಂಡಿಲ್ಲ. ಇಎಸ್‌ಝಡ್ ಕಡಿತ ಪರಿಷ್ಕೃತ ಪ್ರಸ್ತಾವನೆಯು ಅರಣ್ಯ ಸಚಿವಾಲಯದ 2011ರ ಮಾರ್ಗಸೂಚಿಗಳ ಸ್ಪಷ್ಟ ಉಲ್ಲಂಘನೆ ಎಂದು ಸಿಇಸಿ ಅಭಿಪ್ರಾಯಪಟ್ಟಿದೆ.

### ಮೂರು ಆನೆ ಕಾರಿಡಾರ್‌ಗಳಿಗೆ ಧಕ್ಕೆ

- **ಕರಡಿಕ್ಕಲ್-ಮಾದೇಶ್ವರ ಕಾರಿಡಾರ್:** ಈ ಕಾರಿಡಾರ್ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಿಂದ ಹೊಸೂರು ಅರಣ್ಯ ವಿಭಾಗದ ಕಡೆಗೆ ಮತ್ತು ನಂತರ ಕಾವೇರಿ ಭೂದೃಶ್ಯದವರೆಗೆ ಆನೆಗಳ ನಿಯಮಿತ ಸಂಚಾರಕ್ಕೆ ಅನುವು ಮಾಡಿಕೊಡುತ್ತದೆ. ಈ ಕಾರಿಡಾರ್ 6 ಕಂದಾಯ ಗ್ರಾಮಗಳನ್ನು ಹೊಂದಿದೆ. ಕಲ್ಲುಗಣಿಗಾರಿಕೆ, ರಾಜ್ಯ ಹೆದ್ದಾರಿ ಮತ್ತು ರೆಸಾರ್ಟ್‌ಗಳ ವ್ಯಾಪಕ ಹೆಚ್ಚಳದಿಂದ ಆನೆಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ ನಿಷೇಧಕ್ಕೆ ತುರ್ತು ಕ್ರಮ ಅಗತ್ಯ.
- **ಥಳ್ಳಿ-ಬಿಳಿಕಲ್ ಕಾರಿಡಾರ್:** ಈ ಅಂತರ್-ರಾಜ್ಯ ಕಾರಿಡಾರ್ ಮೂಲಕ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಮತ್ತು ಉತ್ತರ ಕಾವೇರಿ ವನ್ಯಜೀವಿ ಅಭಯಾರಣ್ಯದ ನಡುವೆ 100-200 ಆನೆಗಳು ಸಂಚರಿಸುತ್ತವೆ. ಈ ಕಾರಿಡಾರ್ ಏಳು ಕಂದಾಯ ಗ್ರಾಮಗಳ ಮೂಲಕ ಹಾದು ಹೋಗುತ್ತದೆ. ಈ ಭಾಗದಲ್ಲಿ ರಸ್ತೆಗಳು, ವಿದ್ಯುತ್ ಮಾರ್ಗಗಳು, ಆನೆ ತಡೆ ಬೇಲಿಗಳು ಹಾಗೂ ಒತ್ತುವರಿ ಹೆಚ್ಚಾಗಿದೆ. ಆದರೂ, ಈ ಭಾಗದಲ್ಲಿ ಆನೆಗಳ ಸಂಚಾರ ಜಾಸ್ತಿ ಆಗಿದೆ. ಒತ್ತುವರಿ ತೆರವುಗೊಳಿಸಿ ಈ ಪ್ರದೇಶದ ಸಂರಕ್ಷಣೆಗೆ ಆದ್ಯತೆ ಕೊಡಬೇಕು.
- **ಬಿಳಿಕಲ್-ಜವಳಗಿರಿ ಕಾರಿಡಾರ್ (ಅಂತರ್-ರಾಜ್ಯ):** ಬಿಳಿಕ್ಕಲ್ ರಾಜ್ಯ ಅರಣ್ಯವನ್ನು ಜವಳಗಿರಿ ಮೀಸಲು ಅರಣ್ಯದೊಂದಿಗೆ ಸಂಪರ್ಕಿಸುವ ಈ ಕಾರಿಡಾರ್‌ನಲ್ಲಿ ಸುಮಾರು 200 ಆನೆಗಳಿವೆ. ಈ ಪ್ರದೇಶವು ಕಂದಾಯ ಗ್ರಾಮಗಳನ್ನು ಹೊಂದಿಲ್ಲ. ಆದಾಗ್ಯೂ, ರಸ್ತೆಗಳು ಮತ್ತು ಧಾರ್ಮಿಕ ಕೇಂದ್ರಗಳಿಂದಾಗಿ ಆನೆಗಳ ಸಂಚಾರಕ್ಕೆ ಅಡೆತಡೆ ಸೃಷ್ಟಿಯಾಗುತ್ತಿದೆ. ಆವಾಸಸ್ಥಾನ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು.

- ಬೆಂಗಳೂರಿನ ಸುತ್ತಮುತ್ತ ತ್ವರಿತ ನಗರ ವಿಸ್ತರಣೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಾಂಪ್ರದಾಯಿಕ ಆನೆ ಕಾರಿಡಾರ್‌ಗಳ ಅವನತಿಯಿಂದಾಗಿ ಸಮಸ್ಯೆ ಮತ್ತು ಬಿಗಡಾಯಿಸಿದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ದಕ್ಷಿಣ, ಪಶ್ಚಿಮ, ಆಗ್ನೇಯ ಮತ್ತು ನೈರುತ್ಯ ಭಾಗಗಳಲ್ಲಿ ಮಾನವ-ಆನೆ ಸಂಘರ್ಷ ಪ್ರಕರಣಗಳು ವ್ಯಾಪಕ ಪ್ರಮಾಣದಲ್ಲಿ ಜಾಸ್ತಿ ಆಗಿದೆ ಸುಸ್ಥಿರ ಮಾನವ ಅಭಿವೃದ್ಧಿ ಹಾಗೂ ಪರಿಸರ

ಸಂರಕ್ಷಣೆ ಸಮತೋಲನದಿಂದ ಸಾಗಲು ಇಎಸ್‌ಝಡ್‌ಗಳು ನಿಯಂತ್ರಕಗಳಾಗಿ ಕೆಲಸ ಮಾಡುತ್ತವೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

## ❖ ಒಕ್ಕೂಟ ವ್ಯವಸ್ಥೆಗೆ ಸಂವಿಧಾನದ ಕಾವಲು

# ಒಕ್ಕೂಟ ವ್ಯವಸ್ಥೆಗೆ ಸಂವಿಧಾನದ ಕಾವಲು

ಸಂವಿಧಾನವೇ ಬೆಳಕು

Curated by DH DECCAN HERALD ಪ್ರಜಾವಾಣಿ

• ಜಿ.ಬಿ.ನಾಗರಾಜ್

ಭಾರತವು 'ರಾಜ್ಯಗಳ ಒಕ್ಕೂಟ' (Union of States) ಎಂಬುದನ್ನು ಸಂವಿಧಾನ ಸ್ಪಷ್ಟಪಡಿಸಿದೆ. 'ಭಾರತೀಯ ಸಂವಿಧಾನ'ದ ಮೊದಲ ವಿಧಿಯಲ್ಲಿಯೇ ಈ ಉಲ್ಲೇಖವಿದೆ. ಕೇಂದ್ರ ಮತ್ತು ರಾಜ್ಯ ಎಂಬ ಎರಡು ಹಂತದ ಆಡಳಿತ ವ್ಯವಸ್ಥೆ ದೇಶದಲ್ಲಿದೆ. ಒಕ್ಕೂಟ ವ್ಯವಸ್ಥೆ ಸುಗಮವಾಗಿ ಸಾಗಲು ಕೇಂದ್ರ, ರಾಜ್ಯ ಹಾಗೂ ಸಮವರ್ತಿ ಪಟ್ಟಿಯಲ್ಲಿ ಅಧಿಕಾರ ವರ್ಗೀಕರಿಸಲಾಗಿದೆ.

ಸಂವಿಧಾನ ರಚನಾ ಸಮಿತಿ 1949ರ ನ.26ರಂದು ಒಕ್ಕೂಟ ವ್ಯವಸ್ಥೆಗೆ ಸಮ್ಮತಿ ಸೂಚಿಸಿತು. 1950 ಜ.26ರಂದು ಸಂವಿಧಾನ ಅನುಷ್ಠಾನಗೊಂಡಿತು. ಅಂದಿನಿಂದಲೇ ಒಕ್ಕೂಟ ವ್ಯವಸ್ಥೆಗೆ ಸಾಂವಿಧಾನಿಕ ಮುದ್ರೆ ಸಿಕ್ಕಿತು. 'ರಾಜ್ಯಗಳ ಒಕ್ಕೂಟ'ವು ದೇಶದ ಸಮಗ್ರತೆಯನ್ನು ರಕ್ಷಿಸಿ, 'ವೈವಿಧ್ಯದಲ್ಲಿ ಏಕತೆ'ಯನ್ನು ಕಾಪಾಡಿಕೊಳ್ಳಲು ರೂಪಿಸಿದ ವಿಶಿಷ್ಟ ವ್ಯವಸ್ಥೆಯಾಗಿದೆ.

ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಯಾಗಿ ಹಿಡಿದಿಟ್ಟಿದ್ದು ಸಂವಿಧಾನ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ರಾಜಕೀಯ, ಆರ್ಥಿಕ, ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಸಂಘರ್ಷಗಳು ನಡೆದಿದ್ದರೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಆಗದಂತೆ ಕಾಪಾಡಿದೆ. ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಗೆಲ್ಲುವುದಕ್ಕೆ ಸಂವಿಧಾನದ ಕೊಡುಗೆ ಅನನ್ಯ. 'ರಾಜ್ಯಗಳ ಒಕ್ಕೂಟ'ದಲ್ಲಿ ಪ್ರತಿ ರಾಜ್ಯ ತನ್ನದೇ ಆಗಿರುವ ಅಸ್ಮಿತೆ, ಅನನ್ಯತೆ ಹಾಗೂ ಸಂಪನ್ಮೂಲ ಕಾಪಾಡಿಕೊಳ್ಳುವ ಅವಕಾಶವನ್ನು ಸಂವಿಧಾನ ಕಲ್ಪಿಸಿದೆ.

1947ರ ಆ.15ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೂ ದೇಶದೊಳಗಿನ 570ಕ್ಕೂ ಹೆಚ್ಚು ಸಂಸ್ಥಾನಗಳಲ್ಲಿ ರಾಜಾಡಳಿತವಿತ್ತು. ಭಾರತದಲ್ಲಿ ತಮ್ಮ ಸಂಸ್ಥಾನಗಳನ್ನು ವಿಲೀನಗೊಳಿಸಲು ಅನೇಕರು ಹಿಂದೇಟು ಹಾಕಿದರು. ಈ ಸಂಸ್ಥಾನಗಳನ್ನು ಒಗ್ಗೂಡಿಸಿ ಭಾರತೀಯತೆಯ ಸ್ವರೂಪ ನೀಡುವುದು ಆರಂಭದಲ್ಲಿ ಸವಾಲಾಗಿತ್ತು. ಭಾಷಾವಾರು ರಾಜ್ಯ ರಚನೆ ದೇಶದ ಒಕ್ಕೂಟ ವ್ಯವಸ್ಥೆಯನ್ನು ಭದ್ರಪಡಿಸಿತು.

ದೇಶದಲ್ಲಿ ಖನಿಜ ಸಂಪತ್ತು ಹೇರಳವಾಗಿದೆ. ಒಡಿಶಾ, ಮಹಾರಾಷ್ಟ್ರದಲ್ಲಿ ಕಲ್ಲಿದ್ದಲು, ಕರ್ನಾಟಕದಲ್ಲಿ ಕಬ್ಬಿಣದ ಅದಿರು ಲಭ್ಯವಿವೆ. ಪರಿಸರವನ್ನು ಕಾಪಾಡಿಕೊಂಡು ಸಂಪತ್ತು ಅನುಭವಿಸಬೇಕಿದೆ. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಅಗತ್ಯವಿದೆ. ಭವಿಷ್ಯದ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಣಕಾಸು, ಜಲ, ಗಣಿ ಸೇರಿದಂತೆ ದೇಶದ ಸಂಪನ್ಮೂಲಗಳ ಹಂಚಿಕೆಯಾಗಿದೆ. ಸಂವಿಧಾನವು ಸ್ಪಷ್ಟ ಮಾರ್ಗದರ್ಶನ ಕೂಡ ನೀಡಿದೆ. ❖



'ಸಂವಿಧಾನವೇ ಬೆಳಕು' – ಒಂದು ಚರ್ಚೆ'ಯ ಭಾಗವಾಗಿ ದಾವಣಗೆರೆಯಲ್ಲಿ ನಡೆದ 'ಒಕ್ಕೂಟ ವ್ಯವಸ್ಥೆ ಮತ್ತು ಸಂಪನ್ಮೂಲ (ಹಣಕಾಸು, ಜಲ, ಗಣಿ) ಹಂಚಿಕೆ ಆಗುತ್ತಿರುವುದೇನು?' ಸಂವಾದದಲ್ಲಿ ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಮಾತನಾಡಿದರು. ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ್ ಕುಮಾರ್ ಪಾಳೇದ, ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಕರೆಣ್ಣವರ, 'ಪ್ರಜಾವಾಣಿ' ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ, ಸಾಮಾಜಿಕ ಕಾರ್ಯಕರ್ತ ಬಿ.ಎಂ. ನಿರಂಜನ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

### ಒಕ್ಕೂಟ ವ್ಯವಸ್ಥೆ: ಸಂವಾದ

'ಒಕ್ಕೂಟ ವ್ಯವಸ್ಥೆ ಮತ್ತು ಸಂಪನ್ಮೂಲ (ಹಣಕಾಸು, ಜಲ, ಗಣಿ) ಹಂಚಿಕೆ - ಆಗುತ್ತಿರುವುದೇನು?' ಎಂಬ ವಿಷಯದ ಕುರಿತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ ಸಂಸ್ಥೆಯ ಸಹಯೋಗದಲ್ಲಿ ದಾವಣಗೆರೆಯಲ್ಲಿ ಸಂವಾದ ನಡೆಯಿತು.

'ಸಂವಿಧಾನವೇ ಬೆಳಕು– ಒಂದು ಚರ್ಚೆ' ವಿಷಯದ ಭಾಗವಾಗಿ ನಡೆದ ಸಂವಾದದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಪಾಲ್ಗೊಂಡಿದ್ದರು. ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಕರೆಣ್ಣವರ, ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ, ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕಕುಮಾರ್ ಪಾಳೇದ ಹಾಗೂ ಸಾಮಾಜಿಕ ಕಾರ್ಯಕರ್ತ ಬಿ.ಎಂ. ನಿರಂಜನ್ ಸಂವಾದದಲ್ಲಿ ಪಾಲ್ಗೊಂಡಿದ್ದ ಪ್ರಮುಖರು. 'ಪ್ರಜಾವಾಣಿ' ದಾವಣಗೆರೆ ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ ಸಂವಾದದ ಸಂವಹನಕಾರರಾಗಿದ್ದರು.

### ಚರ್ಚೆಯ ಪ್ರಮುಖ ಅಂಶಗಳು

- ಸ್ವಾತಂತ್ರ್ಯ ಪೂರ್ವದ, 1935ರ 'ಭಾರತ ಸರ್ಕಾರದ ಕಾಯ್ದೆ' ಒಕ್ಕೂಟ ವ್ಯವಸ್ಥೆಯ ಕುರಿತ ಚರ್ಚೆಯನ್ನು ಮುನ್ನೆಲೆಗೆ ತಂದಿತು. ಆಗ ಭಾರತದಲ್ಲಿ ಪ್ರಾಂತೀಯ ಮತ್ತು ಕೇಂದ್ರೀಯ ವ್ಯವಸ್ಥೆ ಜಾರಿಯಲ್ಲಿತ್ತು.
- 1946ರಲ್ಲಿ ಮೀರಠ್‌ನಲ್ಲಿ ನಡೆದ ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದಂತೆ ನಿರ್ಣಯ ಮಂಡಿಸಿದರು.
- ಸಂವಿಧಾನವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ವ್ಯವಸ್ಥೆ ರೂಪಿಸಿದೆ. ನ್ಯಾಯಾಂಗ ಸ್ವತಂತ್ರವಾಗಿದ್ದು, ಕೇಂದ್ರ ಮತ್ತು ರಾಜ್ಯಗಳ ನಡುವೆ ಮೂಡುವ ಗೊಂದಲ, ವ್ಯಾಜ್ಯಗಳನ್ನು ಬಗೆಹರಿಸುವ ಜವಾಬ್ದಾರಿ ಹೊಂದಿದೆ.
- ಒಕ್ಕೂಟ ವ್ಯವಸ್ಥೆಗೆ ಅಪಾಯ ಎದುರಾಗುವ ಸಂದರ್ಭ ತೀರಾ ವಿರಳ. ಸಂವಿಧಾನ ಹಾಗೂ ನ್ಯಾಯಾಂಗ ವ್ಯವಸ್ಥೆ ಸಬಲವಾಗಿದೆ. ಲಿಖಿತ ಸಂವಿಧಾನದಲ್ಲಿ ಈ ಬಗ್ಗೆ ಸ್ಪಷ್ಟತೆ ಇದೆ.
- ನೇರ ತೆರಿಗೆ, ಪರೋಕ್ಷ ತೆರಿಗೆ, ಖನಿಜ ಸಂಪನ್ಮೂಲಗಳ ಹಂಚಿಕೆಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಸ್ಥೂಲವಾದ ಮಾರ್ಗದರ್ಶನವಿದೆ.

ಪ್ರಜಾವಾಣಿ ನೋಡಿಯೊ

ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

## ❖ ಕೆಪೆಕ್: ₹16 ಕೋಟಿ ಸಹಾಯಧನ ಬಿಡುಗಡೆ


**ಸಂದರ್ಭ: ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಉತ್ತೇಜನ ಯೋಜನೆ ಅಡಿ, ರಾಜ್ಯದ 414 ಫಲಾನುಭವಿಗಳಿಗೆ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮವು (ಕೆಪೆಕ್) ₹16.28 ಕೋಟಿಯಷ್ಟು ಸಹಾಯಧನ ಬಿಡುಗಡೆ ಮಾಡಿದೆ.**

- ಈ ಯೋಜನೆಯ 50ನೇ ಬ್ಯಾಚಿನಲ್ಲಿ ರಾಜ್ಯದ 414 ಫಲಾನುಭವಿಗಳನ್ನು ಕೇಂದ್ರ ಸರ್ಕಾರವು ಆಯ್ಕೆ ಮಾಡಿದೆ.
- ಸರ್ಕಾರದ ಸಹಾಯಧನದ ಪಾಲನ್ನು ಬಿಡುಗಡೆ ಮಾಡಲಾಗಿದೆ ಎಂದು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ತಿಳಿಸಿದ್ದಾರೆ.
- 2025-26 ಸಾಲಿನಲ್ಲಿ ಒಟ್ಟು 5,000 ಘಟಕಗಳ ಸ್ಥಾಪನೆಗೆ ರಾಜ್ಯ ಸರ್ಕಾರವು ₹206 ಕೋಟಿ ಅನುದಾನವನ್ನು ತೆಗೆದಿರಿಸಿದೆ. ಈ ಸಾಲಿನಲ್ಲಿ ಇನ್ನೂ 1,000 ಫಲಾನುಭವಿ ಗಳಿಗೆ ಸಹಾಯಧನ ಒದಗಿಸಲು ಕೇಂದ್ರ ಸರ್ಕಾರದಿಂದ ₹79 ಕೋಟಿ ಹೆಚ್ಚುವರಿ ಅನುದಾನ ಒದಗಿಸಿ ಎಂದು ಕೃಷಿ ಸಚಿವಾಲಯಕ್ಕೆ ಇದೇ 5ರಂದು ಮನವಿ ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ.

## ❖ 'ರಫ್ತು ಹೆಚ್ಚಳ ಅಗತ್ಯ'

**ಸಂದರ್ಭ: 'ಭಾರತವು ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆ ಆಗಬೇಕಾದರೆ ಆಮದನ್ನು ಕಡಿಮೆ ಮಾಡಿ. ರಫ್ತು ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕಾದ ಅಗತ್ಯವಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.**

- ರಸ್ತೆ ನಿರ್ಮಾಣದಲ್ಲಿ ಪೆಟ್ರೋಲಿಯಂ ಮುಕ್ತ ವಸ್ತುವಾದ ಜೈವಿಕ ಡಾಂಬರು (ಬಯೊ ಬಿಟುಮನ್) ಬಳಸುವುದರಿಂದ ವಿಕಸಿತ ಭಾರತ ಗುರಿ ಸಾಧನೆಗೆ ನೆರವಾಗಲಿದೆ ಎಂದು ಅವರು ಹೇಳಿದ್ದಾರೆ. ದೇಶದ ಕಚ್ಚಾ ತೈಲ ಆಮದು ಕಡಿಮೆ ಮಾಡುವಲ್ಲಿ ಕೃಷಿ ತ್ಯಾಜ್ಯ ಹೇಗೆ ನೆರವಾಗುತ್ತಿದೆ ಎಂದು ಇಲ್ಲಿ ನಡೆದ ಕಾರ್ಯಕ್ರಮ-ದಲ್ಲಿ ವಿವರಿಸಿದ್ದಾರೆ.
- ಜಗತ್ತಿನಲ್ಲಿ ಮೊದಲ ಬಾರಿಗೆ ಜೈವಿಕ ಡಾಂಬರನ್ನು ವಾಣಿಜ್ಯ ಉದ್ದೇಶಕ್ಕೆ ತಯಾರಿಸಿದ್ದು ಭಾರತ. ಇದು ರೈತರನ್ನು ಸಬಲೀಕರಿಸುತ್ತಿದೆ. ಗ್ರಾಮೀಣ ಭಾಗದಲ್ಲಿ ಜೀವನೋಪಾಯವನ್ನು ಸೃಷ್ಟಿಸಿದೆ ಮತ್ತು ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ನೀಡಿದೆ ಎಂದು ತಿಳಿಸಿದ್ದಾರೆ.

## ❖ ಬೆಟ್ಟದೆತ್ತರ ಬೆಳೆದ 'ಘಟ್ಟದ ಜೀವ'

# ಬೆಟ್ಟದೆತ್ತರ ಬೆಳೆದ 'ಘಟ್ಟದ ಜೀವ'

• ಶಾರದಾ ಗೋಪಾಲ

ಪಶ್ಚಿಮ ಘಟ್ಟಗಳ ಮೇಲೆ ಅವ್ಯಾಹತವಾಗಿ ಪ್ರಹಾರಗಳು ನಡೆಯುತ್ತಿರುವ ಈ ದಿನಗಳಲ್ಲಿ ಪಶ್ಚಿಮ ಘಟ್ಟಗಳ ಅಧ್ಯಯನಕ್ಕಾಗಿ ತಮ್ಮ ಜೀವವನ್ನೇ ಮೀಸಲಿಟ್ಟಿದ್ದ ದೇಶದ ಅತಿ ಮುಖ್ಯ ಪರಿಸರ ವಿಜ್ಞಾನಿಯನ್ನು ಕಳೆದುಕೊಂಡಿದ್ದು ಪರಿಸರ ಮತ್ತು ಪಶ್ಚಿಮಘಟ್ಟಗಳ ಕುರಿತು ಚಿಂತನೆ ಮಾಡುತ್ತಿರುವ ಜನರಿಗೆ ಬಲು ದೊಡ್ಡ ಆಘಾತ.

ಇಡೀ ಪಶ್ಚಿಮ ಘಟ್ಟಗಳಿಗಾಗಿಯೇ ಬದುಕಿದ್ದ ಜೀವವದು. ಅದು ಕೇವಲ ಕುರುಡು ಪ್ರೀತಿಯಾಗಿರಲಿಲ್ಲ. ಬದಲಿಗೆ ಇಡೀ ಪಶ್ಚಿಮ ಘಟ್ಟಗಳನ್ನೂ ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಘಟ್ಟಗಳು ತಮ್ಮೊಡಲಲ್ಲಿ ಸಲಹುತ್ತಿದ್ದ ಅಪಾರ ಜೀವ ರಾಶಿಯನ್ನೂ ಅಧ್ಯಯನ ಮಾಡಿ ಇದರ ಉಳಿವಿಲ್ಲದೆಯೇ ಭಾರತಕ್ಕೆ ಉಳಿವಿಲ್ಲ, ಈ ಭೂಗೋಳಕ್ಕೆ ಉಳಿವಿಲ್ಲ ಎಂದು ಸ್ಪಷ್ಟವಾದ ನಿರ್ಣಯಕ್ಕೆ ಬಂದ ನಂತರ ತಾಳಿದ ನಿಲುವಾಗಿತ್ತದು.

ಅಮೆರಿಕದಿಂದ ಜೀವವಿಜ್ಞಾನ, ಪರಿಸರ ವಿಕಾಸವಾದಗಳಲ್ಲಿ ಉನ್ನತ ವ್ಯಾಸಂಗ ಮುಗಿಸಿ ಭಾರತಕ್ಕೆ ಅವರು ಮರಳುವಾಗ ಮಿತ್ರರನೇಕರು ಹಿಂದೆಳೆಯಲು ಪ್ರಯತ್ನಿಸಿದ್ದರು. 'ಅಲ್ಲೇನಿದೆ ಭಾರತದಲ್ಲಿ? ಒಂದು ಒಳ್ಳೆಯ ನೌಕರಿಯೂ ಸಿಗಲಿಕ್ಕಿಲ್ಲ, ಅಧ್ಯಯನಕ್ಕೆ ಅವಕಾಶವೂ ಸಿಗಲಿಕ್ಕಿಲ್ಲ' ಎಂದು. ಆದರೆ ತನಗೇನು ಸಿಗುತ್ತದೆ ಎನ್ನುವುದಕ್ಕಿಂತ ತಾನೇನು ಮಾಡಬೇಕು ಎಂಬುದನ್ನೇ ಮುಖ್ಯವಾಗಿರಿಸಿಕೊಂಡು ಪತ್ನಿ ಸುಲೋಚನಾರೊಂದಿಗೆ ಭಾರತಕ್ಕೆ ಮರಳಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸುಲೋಚನಾ ಅವರಿಗೆ ಸಂದರ್ಶನಕ್ಕೆ ಕರೆ ಬಂದಾಗ ಅವರು ಮ್ಯಾಥಮ್ಯಾಟಿಕ್ ಬಯೋಲಾಜಿ ತಜ್ಞ ತಮ್ಮ ಪತಿಗೂ ಅವಕಾಶವಿದೆಯೇ ಎಂದು ಕೇಳಿದಾಗ ನಿರ್ದೇಶಕರಾಗಿದ್ದ ಸತೀಶ್ ಧವನ್ ಇಬ್ಬರನ್ನೂ ಒಟ್ಟಿಗೇ ಕೆಲಸಕ್ಕೆ ತೆಗೆದುಕೊಂಡರು.


ಐಐಎಸ್‌ಸಿಗೆ ಬಂದ ಗಾಡ್ಗೀಳರು ಮತ್ತೆ ಹಿಂದಿರುಗಿ ನೋಡಲಿಲ್ಲ. ಇಲ್ಲಿ ತಮ್ಮ ಕೆಲಸ ಮಾಡುತ್ತಲೇ ತಮ್ಮ ಪ್ರೀತಿಯ ಪಶ್ಚಿಮಘಟ್ಟಗಳ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತ ನಡೆದರು. ಪರಿಸರ ಕ್ಷೇತ್ರಕ್ಕೆ ಅವರ ಕೊಡುಗೆ ಒಂದೇ, ಎರಡೇ? ಬಂಡೀಪುರದ ಆನೆಗಳ ಹಿಂಡಿನಿಂದ ಆರಂಭವಾದ ಅಧ್ಯಯನ, ಹಾಗೆಯೇ ಕೇರಳದ ಶಾಂತಕೊಳ್ಳ, ದಾಂಡೇಲಿಯ ಬಿದಿರು, ಕಾಡನ್ನೇ ನಂಬಿ ಬದುಕುತ್ತಿರುವ ಗೌಳಿ, ಕುಣಬಿ ಜನಾಂಗ, ಗೋವಾ ಮಹಾರಾಷ್ಟ್ರದಲ್ಲಿ ಹಬ್ಬಿದ ಸಹ್ಯಾದ್ರಿಯನ್ನು ದಾಟಿ, ಗುಜರಾತಿನ ತುದಿಯವರೆಗೂ ಹೋಗುತ್ತದೆ. ಅತ್ತಿ, ಆಲ, ಔದುಂಬರ, ಬಸರಿ, ಅರಳಿಯಂಥ ವರ್ಷವಿಡೀ ಹೂಹಣ್ಣು ಕೊಡುವ ಬೃಹತ್ ಮರಗಳಷ್ಟೇ ಮುಖ್ಯ ಪುಟ್ಟ ಕಣಜೀರಿಗೆ ಕೂಡ ಅವರಿಗೆ. ಆನೆಗಳಷ್ಟೇ ಮುಖ್ಯ ಪುಟ್ಟ ಇರುವೆಯೂ ಕೂಡ. ಮೀನುಗಳಷ್ಟೇ ಮುಖ್ಯ ಹಾರುವ ಪಕ್ಷಿಗಳೂ ಕೂಡ. ಈ ವೈವಿಧ್ಯಮಯ ಪ್ರಪಂಚದಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ಸ್ಥಾನ ಮತ್ತು ಮಾನ ಎರಡೂ ಇವೆಯೆಂದು ಪ್ರತಿಪಾದಿಸಿದವರು ಪ್ರೊ. ಗಾಡ್ಗೀಳರು.

ಬುಟ್ಟಿ ಹೆಣೆಯುವ ಮೇದಾರರು ತಮ್ಮ ಜೀವನವೇ ನಾಶವಾಗುತ್ತಿದೆಯೆಂದು ಅಂದಿನ ಹಣಕಾಸು ಮಂತ್ರಿಗಳಾಗಿದ್ದ ಎಂ.ವೈ.ಘೋರ್ಪಡೆಯವರಿಗೆ ಮುತ್ತಿಗೆ ಹಾಕಿದಾಗ ಅವರು ಬಿದಿರಿನ ಸ್ಥಿತಿಗತಿಯನ್ನು ಅಧ್ಯಯನ ಮಾಡಲು ಪ್ರೊ. ಗಾಡ್ಗೀಳರನ್ನೇ ನೇಮಿಸುತ್ತಾರೆ. ದಾಂಡೇಲಿ ಕಾಗದ ಕಾರ್ಖಾನೆ, ಸುತ್ತಲಿನ ಬಿದಿರಿನ ಕಾಡನ್ನು ನೋಡುತ್ತ ಹೋಗುವ ಗಾಡ್ಗೀಳ್ ಕಾರ್ಖಾನೆ ಮಾಡುತ್ತಿದ್ದ ಬಿದಿರಿನ ನಾಶವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಅಗ್ಗದ ಬೆಲೆಗೆ ಸಿಕ್ಕ ಅಮೂಲ್ಯ ಸಂಪತ್ತನ್ನು ಕಾರ್ಖಾನೆ ಮನಬಂದಂತೆ ಕೊಚ್ಚಿಹಾಕುತ್ತಿದ್ದ ಪರಿಯನ್ನು ಬಹಳ ನೋವಿನಿಂದ ಬರೆಯುತ್ತಾರೆ. 'ಬಿದಿರೆಲ್ಲ ಖರ್ಚಾದ ನಂತರ ಏನು ಮಾಡುತ್ತೀರಿ?' ಗಾಡ್ಗೀಳರ ಪ್ರಶ್ನೆಗೆ, 'ಇದಲ್ಲದಿದ್ದರೆ ಇನ್ನೊಂದು' ಎಂದು ಅಲಕ್ಷ್ಯದಿಂದ ಕಾರ್ಖಾನೆಯ ವ್ಯವಸ್ಥಾಪಕರು ಉತ್ತರಿಸುವ ಪರಿ ನಮ್ಮನ್ನು ಕೂಡ ದಂಗಾಗಿಸುತ್ತದೆ.

ಜೀವ ವಿಜ್ಞಾನದ ಅಧ್ಯಯನ ಮಾಡುತ್ತ ಮಾಡುತ್ತ ಗಾಡ್ಗೀಳರು ಇಂದಿನ ಅಭಿವೃದ್ಧಿಯ ನೀತಿ ಸುತ್ತಲಿನ ಜನರನ್ನು ಒಳಗೊಳ್ಳುತ್ತಿಲ್ಲ, ಜನರನ್ನು ಬಿಟ್ಟು ಅಭಿವೃದ್ಧಿ ಹೇಗೆ ಎಂದು ಪ್ರಶ್ನಿಸಿಕೊಳ್ಳತೊಡಗಿದರು. ಸುಸ್ಥಿರ ಅಭಿವೃದ್ಧಿ ಆಗಬೇಕೆಂದರೆ ಅದರಲ್ಲಿ ಜನರೂ ಇರಬೇಕೆಂಬ ನಿರ್ಧಾರಕ್ಕೆ ಬಂದು ಅದನ್ನೇ ಪ್ರತಿಪಾದಿಸತೊಡಗಿದರು. ಕೇರಳದ ಶಾಂತಕೊಳ್ಳದಲ್ಲಿ ವಿದ್ಯುತ್ ಉತ್ಪಾದನೆಗೆ ಸರಕಾರ ಹೊರಟಾಗ ಅದಕ್ಕೆ ಬಂದ ಪ್ರತಿರೋಧವನ್ನು ನೋಡಿ ಶಾಂತಕೊಳ್ಳದ ಅಧ್ಯಯನ ಕೈಗೊಳ್ಳುತ್ತಾರೆ ಪ್ರೊ. ಗಾಡ್ಗೀಳ್. ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ಪ್ರೊ. ಗಾಡ್ಗೀಳರ ವರದಿಗಳ ಆಧಾರದ ಮೇಲೆ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಯೋಜನೆಯನ್ನು ತಡೆಹಿಡಿಯುತ್ತಾರೆ.

ಕೊಂಕಣ ರೈಲಿನ ಬಗ್ಗೆ, ಭೋಪಾಲ್ ದುರಂತದ ಬಗ್ಗೆ ಕೂಡ ನಿಜವಾದ ಸ್ಥಿತಿಯೇನೆಂದು ಗಾಡ್ಗೀಳರು ಸತ್ಯನಿಷ್ಠವಾದ ವರದಿಗಳನ್ನು ಸಲ್ಲಿಸಿದರೂ ಅಲ್ಲೆಲ್ಲೂ ಆ ವರದಿಗಳಿಗೆ ಮಾನ್ಯತೆ ಸಿಗಲಿಲ್ಲ. ಅದೇ ರೀತಿ ಪಶ್ಚಿಮ ಘಟ್ಟಗಳ ಪರಿಸರ ಪರಿಣತರ ವರದಿಗೂ ಯಾವುದೇ ಮಾನ್ಯತೆ ಸಿಗಲಿಲ್ಲ. ಜನಪರವಾದ ಮತ್ತು ಪರಿಸರ ವಿರೋಧಿ ಕಾರ್ಖಾನೆಗಳ ವಿರುದ್ಧ ಸಲ್ಲಿಸಿದ್ದ ಆ ವರದಿಗಳು ಸಹಜವಾಗಿಯೇ ಉನ್ನತ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಸ್ವಹಿತಾಸಕ್ತರ ಕೈಯಲ್ಲಿ ಸಿಕ್ಕು ಮೂಲೆ ಸೇರಿದ್ದು ಈಗ ಇತಿಹಾಸ. ಗಾಡ್ಗೀಳ್ ವರದಿ ಇಡೀ ದೇಶದಲ್ಲಿಯೇ ಚರ್ಚಿತವಾದರೂ ಸರ್ಕಾರ ಅದನ್ನು ಬಿಡುಗಡೆ ಕೂಡ ಮಾಡಲಿಲ್ಲ, ಯಾರ ಕೈಗೂ ಅದು ತಲುಪದಂತೆ, ಅದರೊಳಗೆ ಏನು ಬರೆದಿದೆ ಎಂದು ತಿಳಿಯದಂತೆ ನೋಡಿಕೊಂಡಿತು. ಅಲ್ಲದೇ, ಕಸ್ತೂರಿರಂಗನ್ ಅವರಿಂದ ಇನ್ನೊಂದು ವರದಿ ಮಾಡಿಸಿತು. ಆದರೆ ಆಗಲೇ ಬಹುಚರ್ಚಿತ ವಿಷಯವಾಗಿದ್ದ ಪಶ್ಚಿಮ ಘಟ್ಟಗಳು, ಅಲ್ಲಿ ಪ್ರಹಾರ ಮಾಡುತ್ತಿರುವ ಬಲಿಷ್ಠ ಬಾಹುಗಳ ಕಾರಣದಿಂದಾಗಿ ಘಟ್ಟಗಳ ಉಳಿವಿಗಾಗಿ ಬರೆದ ಯಾವುದೇ ವರದಿಯನ್ನೂ ಸ್ವೀಕರಿಸಗೊಡಲಿಲ್ಲ.

ಅಂದು ಪಶ್ಚಿಮ ಘಟ್ಟ ಉಳಿಸಿ ಎಂಬ ಪಾದಯಾತ್ರೆಗೆ ಪ್ರೊ. ಗಾಡ್ಗೀಳರ ಅಧ್ಯಯನಗಳು ಬೆಂಬಲವಾಗಿದ್ದವು. ಇಂದು ಮತ್ತೆ ಪಶ್ಚಿಮ ಘಟ್ಟ ಉಳಿಸಿ ಎಂದು ಪಾದಯಾತ್ರೆ, ಜನಜಾಗೃತಿ ಮಾಡುವ ಅವಶ್ಯಕತೆ ಇರುವಾಗಲೇ ಪ್ರೊಫೆಸರ್ ಅವರು ಜೀವನಕ್ಕೆ ವಿದಾಯ ಹೇಳಿದ್ದು ಮಾತ್ರ ತುಂಬಲಾಗದ ನಷ್ಟ. ಎರಡು ತಿಂಗಳ ಹಿಂದೆಯಷ್ಟೇ ತೀರಿಕೊಂಡ ಪತ್ನಿ ಪ್ರೊ. ಸುಲೋಚನಾರನ್ನು ಇಷ್ಟು ಬೇಗ ಸೇರಿಕೊಳ್ಳುವುದರ ಮೂಲಕ ಗಾಡ್ಗೀಳರು ಜೊತೆಗಾತಿಯ ಮೇಲಿನ ಪ್ರೇಮವನ್ನು ಕೂಡ ಜಗತ್ತಿಗೆ ಸಾರಿದ್ದಾರೆ. ಪಶ್ಚಿಮ ಘಟ್ಟಗಳ ಉಳಿವಿಗೆ ಕೆಲಸ ಮಾಡುವುದೊಂದೇ ಅವರಿಗೆ ನಾವೆಲ್ಲ ಸಲ್ಲಿಸಬಹುದಾದ ದೊಡ್ಡ ನಮನ. ❖



### ಮಾಧವ ಗಾಡ್ಗೀಳ್ ನಿಧನ

ಪುಣೆ (ಪಿಟಿಐ): ಪಶ್ಚಿಮ ಘಟ್ಟಗಳ ಸಂರಕ್ಷಣೆಗಾಗಿ ಅವಿರತವಾಗಿ ಶ್ರಮಿಸಿದ, ದೇಶದ ಹೆಸರಾಂತ ಪರಿಸರ ವಿಜ್ಞಾನಿ ಮಾಧವ ಧನಂಜಯ ಗಾಡ್ಗೀಳ್ (83) ಬುಧವಾರ ರಾತ್ರಿ ಪುಣೆಯಲ್ಲಿ ನಿಧನರಾದರು.

'ಅಲ್ಪಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದಿದ್ದಾರೆ' ಎಂದು ಕುಟುಂಬ ಮೂಲಗಳು ತಿಳಿಸಿವೆ. ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಹವಾಮಾನ ವಿಜ್ಞಾನಿಯಾಗಿದ್ದ ಪತ್ನಿ ಸುಲೋಚನಾ ಗಾಡ್ಗೀಳ್ 2025ರ ಜುಲೈನಲ್ಲಿ ಮೃತಪಟ್ಟಿದ್ದರು.

'ಭಾರತದ ಪರಿಸರ ಸಂಶೋಧನೆ ಮತ್ತು ಸಂರಕ್ಷಣಾ ನೀತಿ' ರೂಪಿಸುವಲ್ಲಿ ಗಾಡ್ಗೀಳ್ ಮಹತ್ವದ ಪಾತ್ರ ವಹಿಸಿದ್ದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿರುವ (ಐಐಎಸ್‌ಸಿ) ಪರಿಸರ ವಿಜ್ಞಾನ ಕೇಂದ್ರದ ಸ್ಥಾಪಕರಾಗಿ, 'ಗಾಡ್ಗೀಳ್ ಆಯೋಗ' ಎಂದೇ ಹೆಸರಾಗಿದ್ದ 'ಪಶ್ಚಿಮ ಘಟ್ಟಗಳ ಪರಿಸರ ವಿಜ್ಞಾನ ತಜ್ಞರ ಸಮಿತಿಯ (ಡಬ್ಲ್ಯುಜಿಇಇಪಿ) ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

**ಗಾಡ್ಗೀಳ್ ಅವರು ಜೀವವೈವಿಧ್ಯ ಸಂರಕ್ಷಣೆಯಲ್ಲಿ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಯ ಚಾಂಪಿಯನ್ ಆಗಿದ್ದರು. ಕೇರಳದ ಸೈಲೆಂಟ್ ವ್ಯಾಲಿ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು**
**ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಎಕ್ಸ್ ಪೋಸ್ಟ್‌ನಲ್ಲಿ)

**ಕೇರಳದ ಮಳೆಕಾಡು ಆಂದೋಲನ ಸೇರಿದಂತೆ ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯಲ್ಲಿ ಗಾಡ್ಗೀಳ್ ಅವರ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ**
**ಪಿಣರಾಯಿ ವಿಜಯನ್,** ಕೇರಳ ಮುಖ್ಯಮಂತ್ರಿ

**'ಜನರ ವಿಜ್ಞಾನಿ' ಎಂದೇ ಹೆಸರಾಗಿದ್ದ ಗಾಡ್ಗೀಳ್ ಅವರು ಪರಿಸರ ಸಮತೋಲನಕ್ಕಾಗಿ ಇಡೀ ಬದುಕನ್ನೇ ಮುಡುಪಾಗಿಟ್ಟಿದ್ದರು. ಅವರ ಮಹತ್ಕಾರ್ಯಗಳು ಹಲವು ತಲೆಮಾರುಗಳಿಗೆ ಸ್ಫೂರ್ತಿದಾಯಕ.**
**ದೇವೇಂದ್ರ ಫಡಣವೀಸ್,** ಮಹಾರಾಷ್ಟ್ರ ಮುಖ್ಯಮಂತ್ರಿ

### ಬದುಕಿನ ಪ್ರಮುಖ ಘಟ್ಟಗಳು

- ಪುಣೆಯ ಪ್ರಸಿದ್ಧ ಕುಟುಂಬದಲ್ಲಿ ಗಾಡ್ಗೀಳ್ ಅವರು 1942ರ ಮೇ 24ರಂದು ಜನಿಸಿದರು. ಹೆಸರಾಂತ ಅರ್ಥಶಾಸ್ತ್ರಜ್ಞ, ಗೋಖಲೆ ಇನ್‌ಸ್ಟಿಟ್ಯೂಟ್‌ನ ಮಾಜಿ ನಿರ್ದೇಶಕ ಧನಂಜಯ ರಾಮಚಂದ್ರ ಗಾಡ್ಗೀಳ್ ಅವರ ತಂದೆ. ತಾಯಿ ಪ್ರಮೀಳಾ ಗಾಡ್ಗೀಳ್.
- 1963ರಲ್ಲಿ ಫರ್ಗ್ಯೂಸನ್ ಕಾಲೇಜಿನಿಂದ ಜೀವಶಾಸ್ತ್ರದಲ್ಲಿ ಪದವಿ, 1965ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1969ರಲ್ಲಿ ಪಿಎಚ್.ಡಿ ಅಧ್ಯಯನಕ್ಕಾಗಿ ಹಾರ್ವರ್ಡ್ ವಿಶ್ವದ್ಯಾಲಯ ಸೇರಿದ ಅವರು, ಅಲ್ಲಿ ಗಣಿತ, ಪರಿಸರ ವಿಜ್ಞಾನ ಮತ್ತು ಪ್ರಾಣಿಗಳ ನಡವಳಿಕೆ ಕುರಿತು ಅಧ್ಯಯನ ನಡೆಸಿದರು.
- ಹಾರ್ವರ್ಡ್ ವಿಶ್ವದ್ಯಾಲಯದಿಂದ ಪಿಎಚ್.ಡಿ ಪಡೆದು, 1971ರಲ್ಲಿ ಭಾರತಕ್ಕೆ ಮರಳಿದ ಗಾಡ್ಗೀಳ್, ಪುಣೆಯ ಅಗರ್ಕರ್ ಸಂಶೋಧನಾ ಸಂಸ್ಥೆಯಲ್ಲಿ ವಿಜ್ಞಾನ ಅಧಿಕಾರಿಯಾಗಿ ಸೇರಿದರು. ಅಲ್ಲಿ ಎರಡು ವರ್ಷ ಕಾರ್ಯನಿರ್ವಹಿಸಿದರು.
- 1973ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯನ್ನುಸೇರಿದರು. ಬಳಿಕ ಪರಿಸರ ವಿಜ್ಞಾನಗಳ ಕೇಂದ್ರ, ಸೆಂಟರ್ ಫಾರ್ ಥಿಯರಿಟಿಕಲ್ ಸ್ಟಡೀಸ್ ಸ್ಥಾಪಿಸುವ ಮೂಲಕ ಭಾರತದಲ್ಲಿ ಆಧುನಿಕ ಪರಿಸರ ವಿಜ್ಞಾನ ಸಂಶೋಧನೆಗಳಿಗೆ ಅಡಿಗಲ್ಲು ಹಾಕಿದರು.
- ಜೀವವೈವಿಧ್ಯದ ದೃಷ್ಟಿಯಿಂದ ದುರ್ಬಲವಾದ ಭಾರತದ ವಿವಿಧ ಪ್ರದೇಶಗಳ ಅಧ್ಯಯನಕ್ಕಾಗಿ ಸರ್ಕಾರ ರಚಿಸಿದ್ದ ತಜ್ಞರ ಸಮಿತಿಯ ಅಧ್ಯಕ್ಷರಾಗಿ ಗಾಡ್ಗೀಳ್ ಕಾರ್ಯನಿರ್ವಹಿಸಿದ್ದರು.
- ಜನಸಂಖ್ಯೆ ಹೆಚ್ಚಳ, ಹವಾಮಾನ ವೈಪರೀತ್ಯ, ಮಾನವ ಹಸ್ತಕ್ಷೇಪ, ಅವೈಜ್ಞಾನಿಕ ಅಭಿವೃದ್ಧಿ ಚಟುವಟಿಕೆಗಳಿಂದ ಪಶ್ಚಿಮ ಘಟ್ಟಗಳ ಮೇಲಾಗುತ್ತಿರುವ ಪರಿಣಾಮ ಕುರಿತು ಅವರು ಅಧ್ಯಯನ ನಡೆಸಿದ್ದರು.
- ಡಬ್ಲ್ಯುಜಿಇಇಪಿ ಅಧ್ಯಕ್ಷರಾಗಿದ್ದ ಗಾಡ್ಗೀಳ್, 2010ರಲ್ಲಿ ಪಶ್ಚಿಮ ಘಟ್ಟದ ಬಹು ದೊಡ್ಡ ಭಾಗವನ್ನು 'ಪರಿಸರ ಸೂಕ್ಷ್ಮ ಪ್ರದೇಶ' ಎಂದು ಘೋಷಿಸುವಂತೆ ಶಿಫಾರಸು ಮಾಡಿ ಮಹತ್ವದ ವರದಿ ಸಲ್ಲಿಸಿದ್ದರು.
- ಗಾಡ್ಗೀಳ್ ವರದಿಯು ತೀವ್ರ ಚರ್ಚೆಗೆ ಕಾರಣವಾದರೂ ಇದನ್ನು ಭಾರತದ ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಮೈಲಿಗಲ್ಲು ಎಂದೇ ಗುರುತಿಸಲಾಗಿದೆ.
- ಗಾಡ್ಗೀಳ್ ಅವರು ಪ್ರಧಾನಿಯವರ ವೈಜ್ಞಾನಿಕ ಸಲಹಾ ಮಂಡಳಿ, ರಾಷ್ಟ್ರೀಯ ಸಲಹಾ ಸಮಿತಿ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಸೇರಿದಂತೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಉನ್ನತ ಮಟ್ಟದ ಸಮಿತಿಗಳಲ್ಲೂ ಕಾರ್ಯನಿರ್ವಹಿಸಿದ್ದರು.
- ಐಐಎಸ್‌ಸಿಯಿಂದ 2004ರಲ್ಲಿ ನಿವೃತ್ತರಾದ ಗಾಡ್ಗೀಳ್ ಅವರು ಬಳಿಕ ಪುಣೆಯ ಅಗರ್ಕರ್ ಸಂಶೋಧನಾ ಕೇಂದ್ರ ಮತ್ತು ಗೋವಾ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ, ಶೈಕ್ಷಣಿಕ ಕಾರ್ಯ ಮುಂದುವರಿಸಿದರು.
- ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಗಾಡ್ಗೀಳ್ ಅವರು ನಡೆಸಿದ ಪ್ರಯತ್ನಗಳಿಗಾಗಿ 2024ರಲ್ಲಿ ವಿಶ್ವಸಂಸ್ಥೆಯು ಅವರಿಗೆ 'ಚಾಂಪಿಯನ್ ಆಫ್ ದ ಅರ್ಥ್' ಪುರಸ್ಕಾರ ನೀಡಿ ಗೌರವಿಸಿತ್ತು.
- 1981ರಲ್ಲಿ ಪದ್ಮಶ್ರೀ, 2006ರಲ್ಲಿ ಪದ್ಮವಿಭೂಷಣ, ಶಾಂತಿ ಸ್ವರೂಪ ಭಟ್ನಾಗರ್ ಪುರಸ್ಕಾರ, ವೋಲ್ವೊ ಪರಿಸರ ಪ್ರಶಸ್ತಿ, ಟೇಲರ್ ಪರಿಸರ ಸಾಧಕ ಪ್ರಶಸ್ತಿ ಸೇರಿದಂತೆ ಗಾಡ್ಗೀಳ್ ಅವರಿಗೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಪುರಸ್ಕಾರಗಳು ಲಭಿಸಿವೆ.
- ಸಂಶೋಧಕ ಹಾಗೂ ಬರಹಗಾರರೂ ಆಗಿದ್ದ ಗಾಡ್ಗೀಳ್ ಅವರು, 'ದಿಸ್ ಫಿಶರ್ಡ್ ಲ್ಯಾಂಡ್' ಮತ್ತು 'ಎಕಾಲಜಿ ಆ್ಯಂಡ್ ಈಕ್ವಿಟಿ' ಸೇರಿದಂತೆ ಹಲವು ಕೃತಿಗಳಿಗೆ ಸಹ ಲೇಖಕರಾಗಿದ್ದಾರೆ. 250ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಅವರು ಮಂಡಿಸಿದ್ದರು.
- ಪರಿಸರ ಸಂರಕ್ಷಣೆ ಕುರಿತು ಇಂಗ್ಲಿಷ್ ಮತ್ತು ಮರಾಠಿ ಪತ್ರಿಕೆಗಳಲ್ಲಿ ಅವರು ನಿಯಮಿತವಾಗಿ ಅಂಕಣಗಳನ್ನು ಬರೆದಿದ್ದರು.

Publication Date
09/01/2026

## ❖ 31 ಜಿಲ್ಲೆಗಳಲ್ಲೂ 'ಅಕ್ಕ ಪಡೆ' ನಿಯೋಜನೆ 5 ಪೊಲೀಸ್ ಕಮಿಷನರೇಟ್‌ಗಳಲ್ಲೂ ಸ್ಥಾಪನೆ: ಸಚಿವ ಸಂಪುಟ ತೀರ್ಮಾನ

# 5 ಪೊಲೀಸ್ ಕಮಿಷನರೇಟ್‌ಗಳಲ್ಲೂ ಸ್ಥಾಪನೆ: ಸಚಿವ ಸಂಪುಟ ತೀರ್ಮಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ 31 ಜಿಲ್ಲೆ ಮತ್ತು 5 ಪೊಲೀಸ್ ಕಮಿಷನರೇಟ್‌ಗಳ ವ್ಯಾಪ್ತಿಯಲ್ಲಿ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ 'ಅಕ್ಕ ಪಡೆ'ಗಳನ್ನು ನಿಯೋಜಿಸಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ. ಸಭೆ ಬಳಿಕ, ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು. ಕೆಲವು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದ್ದು, ಈಗ ಎಲ್ಲ ಜಿಲ್ಲೆ ಮತ್ತು ಕಮಿಷನರೇಟ್‌ಗಳ ವ್ಯಾಪ್ತಿಗೂ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದರು.

ದೌರ್ಜನ್ಯ, ಹಿಂಸೆ, ನಿರ್ಲಕ್ಷ್ಯ ಅಥವಾ ಶೋಷಣೆ ಎದುರಿಸುತ್ತಿರುವ ಮಹಿಳೆಯರು ಮಕ್ಕಳಿಗೆ ಸಕಾಲದಲ್ಲಿ ನೆರವಿನ ಹಸ್ತ ಚಾಚುವುದರ ಜತೆಗೆ ಭಯಮುಕ್ತ ವಾತಾವರಣ ಸೃಷ್ಟಿಸುವುದೂ ಈ ಪಡೆಯ ಮುಖ್ಯ ಉದ್ದೇಶ. ಅಲ್ಲದೇ, ಶಿಕ್ಷಣದ ಮೂಲಕ ಹಕ್ಕುಗಳು, ಕಾನೂನುಗಳು, ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ಅವರು ವಿವರಿಸಿದರು.

## ಪ್ರಮುಖ ತೀರ್ಮಾನಗಳು:

- ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಬೆಂಗಳೂರು ಸಂಕೀರ್ಣಕ್ಕೆ ₹17.70 ಕೋಟಿ ಮೊತ್ತದ ಹೊಸ ಸಾಬೂನು ತಯಾರಿಸುವ ಯಂತ್ರ ಖರೀದಿ
- ಕೆಕೆಆರ್‌ಡಿಬಿ ಅನುದಾನದಲ್ಲಿ ಕಲಬುರಗಿಯಲ್ಲಿ ₹50 ಕೋಟಿ ವೆಚ್ಚದಲ್ಲಿ ಮೆಗಾ ಡೇರಿ ನಿರ್ಮಾಣ ಮತ್ತು ₹10 ಕೋಟಿ ವೆಚ್ಚದಲ್ಲಿ ಪ್ರಾದೇಶಿಕ ಸಹಕಾರ ಭವನ ಸ್ಥಾಪನೆ
- ರಾಜ್ಯದಾದ್ಯಂತ ₹127.40 ಕೋಟಿ ವೆಚ್ಚದಲ್ಲಿ 196 ಗ್ರಾಮೀಣ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಸ್ಥಾಪನೆಯ ಆದೇಶಕ್ಕೆ ಘಟನೋತ್ತರ ಅನುಮೋದನೆ
- ವಿವಿಧ ಕಾರಾಗೃಹಗಳಲ್ಲಿರುವ 33 ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ಒಪ್ಪಿಗೆ. ಇವರಲ್ಲಿ ಇಬ್ಬರು ಶಿಕ್ಷಾ ಬಂದಿಗಳನ್ನು ಕೇಂದ್ರ ಗೃಹ ಸಚಿವಾಲಯ ಅನುಮತಿ ನೀಡಿದ ನಂತರ ಬಿಡುಗಡೆಗೆ ತೀರ್ಮಾನ
- ಬೆಂಗಳೂರಿನ ಜಯನಗರದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ 2ನೇ ಹಂತದ ಕಟ್ಟಡ ಕಾಮಗಾರಿಗೆ ₹24 ಕೋಟಿ
- ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿನ 166 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 3 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ ₹33.04 ಕೋಟಿ
- ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳು ಮತ್ತು ಮಾರ್ಗ ಮಧ್ಯದ 32 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 3 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ ₹27.28 ಕೋಟಿ
- ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಸರಪಾಡಿ ಮತ್ತು ಇತರೆ 95 ಜನವಸತಿ ಪ್ರದೇಶಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ ₹16.70 ಕೋಟಿ
- ಕಲಬುರಗಿ ವಿಶ್ವವಿದ್ಯಾಲಯ ಆವರಣದಲ್ಲಿ ಕೆಕೆಆರ್‌ಡಿಬಿ ಅನುದಾನದಿಂದ ಎರಡನೇ ಹಂತದಲ್ಲಿ ₹66.75 ಕೋಟಿ ವೆಚ್ಚದಲ್ಲಿ ಜಿಟಿಟಿಸಿ ಕೇಂದ್ರ ಸ್ಥಾಪನೆ
- ಮೈಸೂರು ಮತ್ತು ಸುತ್ತಮುತ್ತಲಿನ ಭಾಗದ ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುವಂತೆ ₹20 ಕೋಟಿ ವೆಚ್ಚದಲ್ಲಿ ನಬಾರ್ಡ್ ಸಹಯೋಗದಲ್ಲಿ ಮೈಸೂರಿನಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ ಸ್ಥಾಪನೆ
- ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಮಹಾತ್ಮಗಾಂಧಿ, ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ, ರಾಜೀವ್‌ಗಾಂಧಿ ಪುತ್ಥಳಿಗಳನ್ನು ಸ್ಥಾಪಿಸಲು ಒಪ್ಪಿಗೆ

Publication Date
09/01/2026

Presented by ಪ್ರಜಾವಾಣಿ

## ❖ 11 ಮಸೂದೆಗಳಿಗೆ ರಾಜ್ಯಪಾಲರ ಅಸ್ತು

**ಸಂದರ್ಭ:ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಯ ಪ್ರಮಾಣ ಮಾರ್ಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಶಿಫಾ ರಸು ಮಾಡಲು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿ ಶಿಷ್ಟ ಬುಡಕಟ್ಟುಗಳ ಆಯೋಗಕ್ಕೆ ಅಧಿಕಾರ ನೀಡುವ ತಿದ್ದುಪಡಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.**

- ಸರ್ಕಾರದಿಂದ ಹೊಸ ದತ್ತಾಂಶ ಅಥವಾ ಮಾಹಿತಿ ಸ್ವೀಕರಿಸಿದ ಬಳಿಕ, ಪರಿಶಿಷ್ಟ ಜಾತಿಯ ವಿವಿಧ ಪ್ರವರ್ಗಗಳಿಗೆ ಒಳ ಮೀಸಲಾತಿ ಹಂಚಿಕೆ ಪ್ರಮಾಣದಲ್ಲಿ ಬದಲಾವಣೆ ಮಾಡಿ ಎಂದು ಆಯೋಗವು ಶಿಫಾರಸು ಮಾಡಬಹುದಾಗಿದೆ.
- **ಇತರ ಮಸೂದೆಗಳು:** ಕರ್ನಾಟಕ ಬಾಡಿಗೆ ತಿದ್ದುಪಡಿ ಮಸೂದೆ, ಬಯಲುಸೀಮೆ ಪ್ರದೇಶಾಭಿ-ವೃದ್ಧಿ ಮಂಡಳಿ ತಿದ್ದುಪಡಿ ಮಸೂದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ತಿದ್ದುಪಡಿ ಮಸೂದೆ, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ತಿದ್ದುಪಡಿ ಮಸೂದೆ, ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ತಿದ್ದುಪಡಿ ಮಸೂದೆ.
- ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ತಿದ್ದುಪಡಿ ಮಸೂದೆ, ಕರ್ನಾಟಕ ಭೂ ಕಂದಾಯ 2ನೇ ತಿದ್ದುಪಡಿ ಮಸೂದೆ, ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಕರ್ನಾಟಕ ವಿಶ್ವವಿ-ದ್ಯಾಲಯ ಎರಡನೇ ತಿದ್ದುಪಡಿ ಮಸೂದೆ, ಚಂದ್ರಗುತ್ತಿ ಶ್ರೀರೇಣುಕಾಂಬ ಕ್ಷೇತ್ರ ಅಭಿವೃದ್ಧಿಪ್ರಾಧಿಕಾರ.
- **ಡಿಸಿಎಂಗೆ ಮಸೂದೆ:** ರಾಜ್ಯಪಾಲರು ಹಿಂತಿರುಗಿಸಿದ್ದ ಎರಡು ಮಸೂದೆಗಳ ಪೈಕಿ 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆ'ಯನ್ನು ಉಪ ಮುಖ್ಯಮಂತ್ರಿಯವರಿಗೆ ಕಳುಹಿಸಲಾಗಿದೆ. 'ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ

ತಿದ್ದುಪಡಿ ಮಸೂದೆ'ಯನ್ನು ಹೆಚ್ಚಿನ ವಿವರಣೆ ಪಡೆಯಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕಳುಹಿಸಲಾಗಿದೆ.

## ❖ ಜಯಮಾಲಾಗೆ ಡಾ.ರಾಜ್, ಸತ್ಯುಗೆ ಕಣಗಾಲ್ ಪ್ರಶಸ್ತಿ

**ಸಂದರ್ಭ: ರಾಜ್ಯ ಸರ್ಕಾರ ಚಲನಚಿತ್ರ ಕ್ಷೇತ್ರದಲ್ಲಿನ 2020ನೇ ಹಾಗೂ 2021ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿ ಗಳನ್ನು ಗುರುವಾರ ಘೋಷಿಸಿದೆ.**

- 2020 ಸಾಲಿನ ಡಾ.ರಾಜಕುಮಾರ್ ಪ್ರಶಸ್ತಿ'ಗೆ ನಟಿ ಜಯಮಾಲಾ, 'ಪುಟ್ಟಣ್ಣ ಕಣಗಾಲ್ ಪ್ರಶಸ್ತಿ'ಗೆ ನಿರ್ದೇಶಕ ಎಂ.ಎಸ್. ಸತ್ಯು, 'ಡಾ.ವಿಷ್ಣುವರ್ಧನ್ ಪ್ರಶಸ್ತಿ'ಗೆ ಸ್ಥಿರ ಛಾಯಾಗ್ರಾಹಕ 'ಪ್ರಗತಿ' ಅಶ್ವತ್ಥನಾರಾಯಣ ಅವರನ್ನು ಆಯ್ಕೆ ಮಾಡಲಾಗಿದೆ.
- 2021 ಸಾಲಿನ 'ಡಾ.ರಾಜಕುಮಾರ್ ಪ್ರಶಸ್ತಿ'ಗೆ ನಿರ್ಮಾಪಕ, ಗೋವಿಂದು, 'ಪುಟ್ಟಣ್ಣ ಕಣಗಾಲ್ ಪ್ರಶಸ್ತಿ'ಗೆ ನಿರ್ದೇಶಕ ಕೆ. ಶಿವರುದ್ರಯ್ಯ, 'ಡಾ.ವಿಷ್ಣುವರ್ಧನ್ ಪ್ರಶಸ್ತಿ'ಗೆ ನಟ ನಿರ್ಮಾಪಕ ಎಂ.ಕೆ. ಸುಂದರ್ ರಾಜ್ ಅವರನ್ನು ಆಯ್ಕೆ ಮಾಡಲಾಗಿದೆ.
- ಈ ಮೂರೂ ಪ್ರಶಸ್ತಿಗಳು ತಲಾ ₹5 ಲಕ್ಷ ನಗದು ಮತ್ತು 50 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ.

## ❖ ಭಾರತದ ಮೇಲೆ ಶೇ 500 ಸುಂಕ ಮಸೂದೆಗೆ ಅಸ್ತು

**ಸಂದರ್ಭ: ರಷ್ಯಾದಿಂದ ತೈಲ ಖರೀಸುವ ದೇಶಗಳ ಮೇಲೆ ಶೇ 500ರಷ್ಟು ಸುಂಕ ವಿಧಿಸಲು ಅವಕಾಶ ನೀಡುವ ಮಸೂದೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಗೆ ಸೂಚಿಸಿದ್ದಾರೆ.**

- ರಷ್ಯಾ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಹೇರುವ ಈ ಮಸೂದೆಯು ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾತೈಲ ಖರೀದಿಸುತ್ತಿರುವ ಭಾರತ, ಚೀನಾ ಮತ್ತು ಇತರ ದೇಶಗಳ ಮೇಲೆ ಅತ್ಯಧಿಕ ಸುಂಕ ವಿಧಿಸಲು ಶ್ವೇತಭವನಕ್ಕೆ ಅವಕಾಶ ನೀಡುತ್ತದೆ.
- ಈ ಕುರಿತು ಮಾಹಿತಿ ನೀಡಿದ ಅಮೆರಿಕದ ಸೆನೆಟರ್ ಲಿಂಡ್ಸೆ ಗ್ರಹಾಂ, 'ಭಾರತ, ಚೀನಾ ಮತ್ತು ಬ್ರೆಜಿಲ್ ನಂತಹ ದೇಶಗಳು ರಷ್ಯಾದಿಂದ ಅಗ್ಗದ ಬೆಲೆಗೆ ತೈಲ ಖರೀದಿಸುತ್ತಿವೆ. ಅದನ್ನು ತಡೆಯುವುದಕ್ಕೆ ಈ ಮಸೂದೆಯು ಶ್ವೇತಭವನಕ್ಕೆ ಅಪರಿಮಿತ ಅಧಿಕಾರ ನೀಡುತ್ತದೆ' ಎಂದರು. 'ರಷ್ಯಾ ವಿರುದ್ಧದ ದ್ವಿಪಕ್ಷೀಯ ನಿರ್ಬಂಧ ಮಸೂದೆ ಬಗ್ಗೆ ನಾನು, ಸೆನೆಟರ್ ಬಂದರಿಂದಾಲ್ ಮತ್ತು ಇತರರ ಜತೆಗೆ ಹಲವು ತಿಂಗಳು ಕೆಲಸ ಮಾಡಿದ್ದೇನೆ. ಅಧ್ಯಕ್ಷ ಟ್ರಂಪ್ ಅವರ ಜತೆ ಈ ಕುರಿತು ಇಂದು ಮಹತ್ವದ ಸಭೆ ನಡೆಯಿತು. ಅವರು ಈ ಮಸೂದೆಗೆ ಹಸಿರು ನಿಶಾನೆ ತೋರಿದ್ದಾರೆ' ಎಂದು ಗ್ರಹಾಂ ತಿಳಿಸಿದರು.
- 'ಇದು ಸಂದರ್ಭೋಚಿತ ನಿರ್ಧಾರ. ಉಕ್ರೇನ್-ರಷ್ಯಾ ಯುದ್ಧ ನಿಲ್ಲಿಸಲು ಅಮೆರಿಕ ಸರ್ವ ಪ್ರಯತ್ನ ಮಾಡುತ್ತಿದೆ. ಆದರೆ, ರಷ್ಯಾ ಅಧ್ಯಕ್ಷ ಬ್ಲಾದಿಮಿರ್ ಪುಟಿನ್ ಅವರು ಮುಗ್ಧರ ಹತ್ಯೆಯನ್ನು ಮುಂದುವರಿಸಿದ್ದಾರೆ. ರಷ್ಯಾದಿಂದ ಕಡಿಮೆ ಬೆಲೆಗೆ ತೈಲ ಖರೀದಿಸುವ ಮೂಲಕ ಕೆಲ ದೇಶಗಳು ಯುದ್ಧವನ್ನು ಉತ್ತೇಜಿಸುತ್ತಿವೆ' ಎಂದಿದ್ದಾರೆ.
- ಉಕ್ರೇನ್‌ನಲ್ಲಿ ಪುಟಿನ್ ಹರಿಸುತ್ತಿರುವ ರಕ್ತಪಾತಕ್ಕೆ ಹಣಕಾಸು ಒದಗಿಸುತ್ತಿವೆ. ಅದನ್ನು ತಡೆಯಲು ಮತ್ತು ತೈಲ ಖರೀದಿ ದೇಶಗಳನ್ನು ಶಿಕ್ಷಿಸಲು ಈ ಮಸೂದೆಯು ಟ್ರಂಪ್ ಅವರಿಗೆ ಅಧಿಕಾರ ನೀಡುತ್ತದೆ' ಎಂದೂ ಹೇಳಿದ್ದಾರೆ.
- ಮುಂದಿನ ವಾರದ ಆರಂಭದಲ್ಲಿ ಈ ಮಸೂದೆಗೆ ಎರಡೂ ಪಕ್ಷಗಳ ಸದಸ್ಯರು ಬಹುಮತದಿಂದ ಅಂಗೀಕಾರ ನೀಡುತ್ತಾರೆ ಎಂಬ ನಿರೀಕ್ಷೆಯಿದೆ ಎಂದು ಗ್ರಹಾಂಭರವಸೆ ವ್ಯಕ್ತಪಡಿಸಿದರು.

- ಗ್ರಹಾಂ ಮತ್ತು ಬ್ಲೂಮೆಂಥಾಲ್ ಅವರು ಈ ಮಸೂದೆಯನ್ನು ಕಳೆದ ವರ್ಷ ಪರಿಚಯಿಸಿದ್ದರು. ರಷ್ಯಾದಿಂದ ತೈಲ ಖರೀದಿಸುವ ಮತ್ತು ಅದನ್ನು ಮರು ಮಾರಾಟ ಮಾಡುವ ದೇಶಗಳ ಮೇಲೆ ಶೇ 500ರಷ್ಟು ಸುಂಕ ವಿಧಿಸುವುದನ್ನು ಅದರಲ್ಲಿ ಪ್ರಸ್ತಾಪಿಸಲಾಗಿದೆ. ಇದನ್ನು ಸೆನೆಟ್‌ನ ವಿದೇಶಾಂಗ ವ್ಯವಹಾರಗಳ ಸಮಿತಿಯ ಸದಸ್ಯರು ಸರ್ವಾನುಮತದಿಂದ ಬೆಂಬಲಿಸಿದ್ದರು.
- ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕವನ್ನು ಈಗಾಗಲೇ ವಿಧಿಸಿದ್ದಾರೆ. ಇದರಲ್ಲಿ ರಷ್ಯಾದಿಂದ ಇಂಧನ ಖರೀದಿಸುತ್ತಿರುವುದಕ್ಕೆ ಶೇ 25ರಷ್ಟು ಸುಂಕವೂ ಸೇರಿದೆ.



## ❖ ಫೆ.1ಕ್ಕೆ ಕೇಂದ್ರ ಬಜೆಟ್

**ಸಂದರ್ಭ: ಸಂಸತ್ತಿನ ಬಜೆಟ್ ಅಧಿವೇಶನವು ಜನವರಿ 28ರಂದು ಆರಂಭವಾಗಿ ಏಪ್ರಿಲ್ 2ರಂದು ಕೊನೆಗೊಳ್ಳಲಿದೆ. ಫೆಬ್ರುವರಿ 1ರಂದು ಬಜೆಟ್ ಮಂಡನೆ ಆಗಲಿದೆ. ವಾಡಿಕೆಯಂತೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 28ರಂದು ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರ ಜಂಟಿ ಸಭೆ ಉದ್ದೇಶಿಸಿ ಮಾಡುವ ಭಾಷಣದೊಂದಿಗೆ ಅಧಿವೇಶನ ಆರಂಭವಾಗುತ್ತದೆ.**

- 'ದ್ರೌಪದಿ ಮುರ್ಮು ಅವರು ಬಜೆಟ್ ಅಧಿವೇಶನಕ್ಕಾಗಿ ಸಂಸತ್ತಿನ ಎರಡೂ ಸದನಗಳನ್ನು ಕರೆಯಲು ಅನುಮೋದನೆ ನೀಡಿದ್ದಾರೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ಅಧಿವೇಶನದ ಮೊದಲ ಹಂತವು ಜನವರಿ 28ರಿಂದ ಫೆಬ್ರುವರಿ 13ರವರೆಗೆ, ಎರಡನೇ ಹಂತವು ಮಾರ್ಚ್ 9ರಿಂದ ಏಪ್ರಿಲ್ 2ರವರೆಗೆ ನಡೆಯಲಿದೆ. ಆರ್ಥಿಕ ಸಮೀಕ್ಷೆ ಹಾಗೂ ಬಜೆಟ್ ಮಂಡನೆಯ ದಿನಾಂಕಗಳನ್ನು ರಿಜಿಜು ಟ್ವೀಟ್‌ನಲ್ಲಿ ಉಲ್ಲೇಖಿಸಿಲ್ಲ
- . ಸಾಮಾನ್ಯವಾಗಿ ಬಜೆಟ್ ಅನ್ನು ಫೆಬ್ರುವರಿ 1ರಂದು ಮಂಡಿಸಲಾಗುತ್ತದೆ.

## ❖ ಒಳಮೀಸಲಾತಿ ಮಸೂದೆ ವಾಪಸ್

**ಸಂದರ್ಭ: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಸರ್ಕಾರದ ಆದೇಶಕ್ಕೆ ಕಾನೂನು ಬಲ ನೀಡುವ ಉದ್ದೇಶದಿಂದ, ವಿಧಾನಮಂಡಲ ಅನುಮೋದನೆ ನೀಡಿದ್ದ ಮಸೂದೆಯನ್ನು ರಾಜ್ಯಪಾಲರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ.**

- ಬೆಳಗಾವಿ ಅಧಿವೇಶನದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿಗಳ (ಉಪವರ್ಗೀಕರಣ) ಮಸೂದೆಗೆ ಸರ್ಕಾರ ಅನುಮೋದನೆ ಪಡೆದಿತ್ತು. ಒಳಮೀಸಲಾತಿ ಕುರಿತು ಸುಪ್ರೀಂ ಕೋರ್ಟ್‌ನ ಮಾನದಂಡ ಮತ್ತು ನಾಗಮೋಹನ ದಾಸ್ ಶಿಫಾರಸಿಗೆ ಅನುಗುಣವಾಗಿಲ್ಲದ ಕಾರಣ ಸ್ಪಷ್ಟನೆ ಕೋರಿ ಹಿಂದಕ್ಕೆ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.
- ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನೂ ವಾಪಸ್ ಕಳುಹಿಸಲಾಗಿದೆ. ಒಟ್ಟು 22 ಮಸೂದೆಗಳಲ್ಲಿ 19 ಮಸೂದೆಗಳಿಗೆ ಒಪ್ಪಿಗೆ ನೀಡಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ತಡೆ) ಮಸೂದೆ ರಾಜ್ಯಪಾಲರ ಪರಿಶೀಲನೆಯಲ್ಲಿದೆ ಎಂದು ಪ್ರಕಟಣೆ ಹೇಳಿದೆ.
- 'ಈ ಕುರಿತ ಕಡತಗಳು ಇನ್ನೂ ಬಂದಿಲ್ಲ, ಅದು ಬಂದ ನಂತರ ಯಾವ ಅಂಶಗಳ ಕುರಿತು ಸ್ಪಷ್ಟೀಕರಣ ಕೋರಿದ್ದಾರೆ ಎಂಬುದು ಗೊತ್ತಾಗಲಿದೆ' ಎಂದು ಕಾನೂನು ಇಲಾಖೆ ಮೂಲಗಳು ತಿಳಿಸಿವೆ.
- ಪರಿಶಿಷ್ಟ ಜಾತಿ ಪಟ್ಟಿಯಲ್ಲಿ-ರುವ 101 ಜಾತಿಗಳಿಗೆ ಮೂರು ಪ್ರವರ್ಗಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ನೀಡಲು ಸರ್ಕಾರದ ಆದೇಶ ಹೊರಡಿಸಿತ್ತು. ಇದರ ರಕ್ಷಣೆಗಾಗಿ, ಮಸೂದೆಯನ್ನೂ ಸರ್ಕಾರ ರೂಪಿಸಿದೆ.

Dr. Rajkumar IAS/KAS Academy

## ❖ ಪ್ರಸಕ್ತ ವರ್ಷ ಜಾಗತಿಕ ಜಿಡಿಪಿ ಶೇ 2.7ರಷ್ಟು ಅಂದಾಜು

**ಸಂದರ್ಭ: ಅಮೆರಿಕ ಭಾರತದ ಮೇಲೆ ಹೇರಿರುವ ಹೆಚ್ಚುವರಿ ಸುಂಕದ ಪರಿಣಾಮದ ನಡುವೆಯೂ, ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಭಾರತವು ಶೇ 6.6ರಷ್ಟು ಜಿಡಿಪಿ ಪ್ರಗತಿ ದಾಖಲಿಸಲಿದೆ ಎಂದುವಿಶ್ವಸಂಸ್ಥೆ ಅಂದಾಜು ಮಾಡಿದೆ.**

- ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆ ಶುಕ್ರವಾರ ಜಾಗತಿಕ ಆರ್ಥಿಕ ಸ್ಥಿತಿಗತಿ ಮತ್ತು ಮುನ್ನೋಟ ವರದಿ -2026 ಬಿಡುಗಡೆ ಮಾಡಿದ್ದು, ಈ ಅವಧಿಯಲ್ಲಿ ಜಾಗತಿಕ ಶೇ.2.7ರಷ್ಟಾಗಬಹುದು ಎಂದು ಹೇಳಿದೆ.
- ಜಿಡಿಪಿ ಭಾರತದಲ್ಲಿ ಹೂಡಿಕೆ ಹೆಚ್ಚಳ, ಬಡ್ಡಿ ದರದಲ್ಲಿ ಆಗಿರುವ ಇಳಿಕೆ, ತೆರಿಗೆ ಸುಧಾರಣೆಗಳು ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ. 2025ರಲ್ಲಿ ಭಾರತದ ಜಿಡಿಪಿ ಶೇ 7.4ರಷ್ಟು ಇರಲಿದೆ. 2026ರಲ್ಲಿ ಇದು ಶೇ 6.6ಕ್ಕೆ ಇಳಿಯಬಹುದು. ಆದರೂ ಭಾರತವು ಉಳಿಯಲಿದೆ ಎಂದು ವರದಿ ಹೇಳಿದೆ.

- ಅಮೆರಿಕದ ಸುಂಕವು ಕೆಲವು ಸರಕುಗಳ ಮೇಲೆ ಪರಿಣಾಮ ಬೀರಬಹುದಾದರೂ, ಎಲೆಕ್ಟ್ರಾನಿಕ್ಸ್ ಮತ್ತು ಸ್ಮಾರ್ಟ್‌ಫೋನ್‌ಗಳಂತಹ ಪ್ರಮುಖ ವಲಯಗಳು ಇದರಿಂದ ವಿನಾಯಿತಿ ಪಡೆಯುವ ನಿರೀಕ್ಷೆ ಇದೆ. ಯುರೋಪ್, ಪಶ್ಚಿಮ ಏಷ್ಯಾ ದೇಶಗಳು ಸೇರಿದಂತೆ ಪ್ರಮುಖ ಮಾರುಕಟ್ಟೆಗಳಿಂದ ಭಾರತದ ಸರಕುಗಳಿಗೆ ಬೇಡಿಕೆ ಹೆಚ್ಚಿದೆ. ಇದು ಸುಂಕದ ಒತ್ತಡವನ್ನು ಕಡಿಮೆ ಮಾಡಲಿದೆ. ತಯಾರಿಕೆ ಮತ್ತು ಸೇವಾ ವಲಯದ ಚಟುವಟಿಕೆಯು ಸದೃಢವಾಗಿರಲಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

## ❖ ಚೀನಾಕ್ಕೆ ಭಾರತದ ರಫ್ತು ಶೇ 33ರಷ್ಟು ಹೆಚ್ಚಳ

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಚೀನಾಕ್ಕೆ, ದೇಶದಿಂದ ₹1.10 ಲಕ್ಷ ಕೋಟಿ ಮೌಲ್ಯದಷ್ಟು ಸರಕುಗಳು ರಫ್ತಾಗಿವೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.**

- 2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ದೇಶದಿಂದ ಚೀನಾಕ್ಕೆ ₹82,965 ಕೋಟಿ ಮೌಲ್ಯದ ಸರಕುಗಳು ರಫ್ತಾಗಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ರಫ್ತು ಪ್ರಮಾಣವು ಶೇ 33ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.
- ಚೀನಾವು ಕ್ರಮೇಣವಾಗಿ, ಭಾರತದ ಪ್ರಮುಖ ರಫ್ತು ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಅಲ್ಲದೆ, ಈ ದತ್ತಾಂಶವು ದ್ವಿಪಕ್ಷೀಯ ವ್ಯಾಪಾರ ಸಂಬಂಧದಲ್ಲಿ ರಚನಾತ್ಮಕ ಬದಲಾವಣೆಯನ್ನು ಸೂಚಿಸುತ್ತಿದೆ ಎಂದು ತಿಳಿಸಿದೆ.
- ಎಲೆಕ್ಟ್ರಾನಿಕ್ಸ್ ವಸ್ತುಗಳು, ಕೃಷಿ ಮತ್ತು ಸಾಗರೋತ್ಪನ್ನಗಳು, ದೂರಸಂಪರ್ಕ ಉಪಕರಣಗಳು ಹಾಗೂ ಮಸಾಲೆಗಳಂತಹ ಉತ್ಪನ್ನಗಳು ರಫ್ತು ಹೆಚ್ಚಳಕ್ಕೆ ಕಾರಣವಾಗಿವೆ ಎಂದು ತಿಳಿಸಿದೆ.
- ಅಮೆರಿಕದಲ್ಲಿ ಭಾರತದ ಸರಕುಗಳಿಗೆ ಹೆಚ್ಚಿನ ಸುಂಕ ಹೇರಲಾಗುತ್ತಿದೆ.
- ಇದರಿಂದ ಅಲ್ಲಿಗೆ ರಫ್ತು ಮಾಡಲು ಕಷ್ಟಕರವಾಗುತ್ತಿದೆ. ಈ ವೇಳೆ ಭಾರತವು ವಿವಿಧ ಮಾರುಕಟ್ಟೆಗಳಲ್ಲಿ ವ್ಯಾಪಾರದ ಅವಕಾಶಕ್ಕಾಗಿ ಅನ್ವೇಷಣೆ ಮಾಡುತ್ತಿದೆ ಎಂದು ರಫ್ತುದಾರರೊಬ್ಬರು ಹೇಳಿದ್ದಾರೆ.

-------------------------------------------ಶುಭವಂದನೆಗಳು-------------------------------------------

